ಈ ಮೆರವಣಿಗೆಯು ವಿಧಾನಸಭೆಯ ಸಭಾಂಗಣದ ಕಡೆಗೆ ಆಗಮಿಸಿತು. ಸಭಾಂಗಣದ ದ್ವಾರದ ಬಳಿ ಮೆರವಣಿಗೆ ಬಂದ ಕೂಡಲೇ ಘನತೆವೆತ್ತ ರಾಜ್ಯಪಾಲರ ಆಗಮನವನ್ನು ಮಾರ್ಷಲ್‌ರವರು ಸಭೆಗೆ ತಿಳಿಸಿದರು. ಘನತೆವೆತ್ತ ರಾಜ್ಯಪಾಲರು ವೇದಿಕೆಯ ಮೇಲೆ ಕುಳಿತುಕೊಳ್ಳುವವರೆಗೆ ಮಾನ್ಯ ಸದಸ್ಯರೆಲ್ಲರೂ ಎದ್ದುನಿಂತುಕೊಂಡಿದ್ದರು. ಮೆರವಣಿಗೆಯು ವೇದಿಕೆಯ ಕಡೆ ಮುಂದುವರಿಯಿತು. ಸಭಾ ಭವನದ ವೇದಿಕೆಯ ಮುಂದೆ ಬಂದ ಬಳಿಕ ಮೆರವಣಿಗೆಯು ಇಬ್ಭಾಗವಾಯಿತು. ಘನತೆವೆತ್ತ ರಾಜ್ಯಪಾಲರು ವೇದಿಕೆಯ ಮೇಲಿರುವ ತಮ್ಮ ಆಸನವನ್ನು ತಲುಪಿದ ಕೂಡಲೇ ರಾಷ್ಟ್ರಗೀತೆಯನ್ನು ನುಡಿಸಲಾಯಿತು. ವೇದಿಕೆಯ ಮೇಲೆ ಮಾನ್ಯ ಸಭಾಧ್ಯಕ್ಷರು ಘನತೆವೆತ್ತ ರಾಜ್ಯಪಾಲರ ಬಲಭಾಗದಲ್ಲಿಯೂ, ಮಾನ್ಯ ಸಭಾಪತಿಯವರು ಘನತೆವೆತ್ತ ರಾಜ್ಯಪಾಲರ ಎಡಭಾಗದಲ್ಲಿಯೂ ಕುಳಿತುಕೊಂಡರು. ಘನತೆವೆತ್ತ ರಾಜ್ಯಪಾಲರು ವೇದಿಕೆಯ ಮಧ್ಯದಲ್ಲಿರುವ ಆಸನದಲ್ಲಿ ಕುಳಿತುಕೊಂಡರು. ಉಭಯ ಸದನಗಳ ಕಾರ್ಯದರ್ಶಿಗಳು ವೇದಿಕೆಯ ಮುಂದಿರುವ ಆಸನಗಳಲ್ಲಿ ಕುಳಿತುಕೊಂಡರು.

1) ವಿಧಾನ ಮಂಡಲದ ಉಭಯ ಸದನಗಳನ್ನುದ್ದೇಶಿಸಿ ಘನತೆವೆತ್ತ ರಾಜ್ಯಪಾಲರು ಮಾಡಿದ ಭಾಷಣ

ಘನತೆವೆತ್ತ ರಾಜ್ಯಪಾಲರಾದ ಶ್ರೀ ಹೆಚ್.ಆರ್. ಭಾರದ್ವಾಜ್‌ರವರು ಕರ್ನಾಟಕ ವಿಧಾನಸಭೆ ಹಾಗೂ ವಿಧಾನ ಪರಿಷತ್ತಿನ ಜಂಟಿ ಅಧಿವೇಶನವನ್ನುದ್ದೇಶಿಸಿ ವಿಧಾನಸಭೆಯ ಸಭಾಂಗಣದಲ್ಲಿ ದಿನಾಂಕ: 22.01.2014 ರಂದು ಮಧ್ಯಾಹ್ನ:12.00 ಗಂಟೆಗೆ ಮಾಡಿದ ಭಾಷಣದ ಅಧಿಕೃತ ವರದಿ.

ಕರ್ನಾಟಕ ವಿಧಾನಪರಿಷತ್ತಿನ ಸನ್ಮಾನ್ಯ ಸಭಾಪತಿಗಳೇ

ಕರ್ನಾಟಕ ವಿಧಾನ ಸಭೆಯ ಸನ್ಮಾನ್ಯ ಸಭಾಧ್ಯಕ್ಷರೇ

ಸನ್ಮಾನ್ಯ ಮುಖ್ಯಮಂತ್ರಿಯವರೇ

ಸನ್ಮಾನ್ಯ ವಿಧಾನಪರಿಷತ್ತಿನ ವಿರೋಧ ಪಕ್ಷದ ನಾಯಕರೇ

ಸನ್ಮಾನ್ಯ ವಿಧಾನಸಭೆಯ ವಿರೋಧ ಪಕ್ಷದ ನಾಯಕರೇ

ಸನ್ಮಾನ್ಯ ಸಚಿವರೆ ಹಾಗೂ ಕರ್ನಾಟಕ ವಿಧಾನ ಮಂಡಲದ ಸನ್ಮಾನ್ಯ ಸದಸ್ಯರೇ,

1. ಕರ್ನಾಟಕದ ವಿಧಾನ ಮಂಡಲದ ಈ ಜಂಟಿ ಅಧಿವೇಶನಕ್ಕೆ ತಮ್ಮೆಲ್ಲರನ್ನು ಸ್ವಾಗತಿಸಲು ನನಗೆ ಅತೀವ ಸಂತೋಷವೆನಿಸುತ್ತದೆ. ನಾನು ತಮ್ಮೆಲ್ಲರಿಗೂ ಹೊಸ ವರ್ಷದ ಶುಭಾಶಯಗಳನ್ನು ಕೋರುತ್ತೇನೆ.
2. ಕರ್ನಾಟಕದಲ್ಲಿ ಹೊಸ ಸರ್ಕಾರ ಅಸ್ತಿತ್ವಕ್ಕೆ ಬಂದಮೇಲೆ ಹಲವಾರು ಕ್ರಾಂತಿಕಾರಿ ಕ್ರಮಗಳನ್ನು ಕೈಗೊಳ್ಳಲಾಗಿದೆ. ರಾಜ್ಯದ ಮತ್ತು ಜನರ ಸರ್ವಾಂಗೀಣ ಅಭಿವೃದ್ಧಿಯನ್ನು ಖಚಿತಪಡಿಸಿಕೊಳ್ಳುವ ನಿಟ್ಟಿನಲ್ಲಿ ಸ್ವಚ್ಛ, ದಕ್ಷ ಮತ್ತು ಪಾರದರ್ಶಕ ಆಡಳಿತ ನೀಡಲು ನನ್ನ ಸರ್ಕಾರ ಬದ್ಧವಾಗಿದೆ. ನನ್ನ ಸರ್ಕಾರವು, ಕೇಂದ್ರ ಸರ್ಕಾರ ಜಾರಿಗೆ ತಂದಿರುವ ಜನ ಲೋಕಪಾಲ್ ವಿಧೇಯಕವನ್ನು ಸ್ವಾಗತಿಸುತ್ತದೆ ಹಾಗೂ ನಮ್ಮ ರಾಜ್ಯದಲ್ಲೂ ಸದರಿ ವಿಧೇಯಕವನ್ನು ತರಲು ಕ್ರಮ ಕೈಗೊಳ್ಳಲಾಗುತ್ತಿದೆ.
3. ನನ್ನ ಸರ್ಕಾರವು, ಆಡಳಿತವನ್ನು ಸಧೃಡಗೊಳಿಸುವ, ಸುವ್ಯವಸ್ಥಿತಗೊಳಿಸುವ ಹಾಗೂ ಸರಳೀಕರಣಗೊಳಿಸುವ ನಿಟ್ಟಿನಲ್ಲಿ ಮಾನ್ಯ ಕಾನೂನು ಸಚಿವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಿದೆ. ಆಡಳಿತವನ್ನು ಪಾರದರ್ಶಕ, ಉತ್ತರದಾಯಿ ಮತ್ತು ಭ್ರಷ್ಟಾಚಾರ ಮುಕ್ತವಾಗಿಸುವ ರಾಜ್ಯ ಸರ್ಕಾರದ ಪ್ರಯತ್ನಗಳನ್ನು ರಾಷ್ಟ್ರಮಟ್ಟದಲ್ಲಿ ಗುರುತಿಸಲಾಗಿದೆ. ಕರ್ನಾಟಕ ಸಕಾಲ ಸೇವೆಗಳ

ಅಧಿನಿಯಮ, 2011ರ ಯೋಜನಾ ಅನುಷ್ಠಾನಕ್ಕೆ ಸಾರ್ವಜನಿಕ ಸೇವಾ ನೀಡಿಕೆಯಲ್ಲಿ ಅತ್ಯುತ್ತಮ ನಿರ್ವಹಣೆಗಾಗಿ ಇ–ಆಡಳಿತಕ್ಕೆ ನೀಡುವ ರಾಷ್ಟ್ರೀಯ ರಜತ ಪುರಸ್ಕಾರ ದೊರೆತಿದೆ. ಭೂ ಆಡಳಿತ ನಿರ್ವಹಣೆ ಪ್ರಕ್ರಿಯೆಗಳನ್ನು ಸುಧಾರಿಸುವ ಗುರಿ ಹೊಂದಿರುವ "ಭೂಮಿ ತಂತ್ರಾಂಶದೊಂದಿಗೆ ಇತರ ಇಲಾಖೆಗಳ ವಿದ್ಯುನ್ಮಾನ ಸಂಯೋಜನೆ" ಯೋಜನೆಗೆ ಚಿನ್ನದ ಪದಕವು ದೊರೆತಿದೆ.

4. ನನ್ನ ಸರ್ಕಾರವು, ರಾಜ್ಯದಲ್ಲಿ ಶಾಂತಿ ಮತ್ತು ನೆಮ್ಮದಿಯನ್ನು ಕಾಪಾಡಿಕೊಂಡು ಬರಲು ಸಮರ್ಥವಾಗಿದೆ. ರಾಜ್ಯದಲ್ಲಿ ಕೋಮು ಘಟನೆಗಳ ಸಂಖ್ಯೆಯಲ್ಲಿ ಇಳಿಕೆಯಾಗಿದೆ ಎಂದು ತಿಳಿಸಲು ನನಗೆ ಸಂತೋಷವೆನಿಸುತ್ತದೆ. ಆದಾಗ್ಯೂ, ನನ್ನ ಸರ್ಕಾರವು ಮೂಲಭೂತವಾದಿ ಸಂಘಸಂಸ್ಥೆಗಳು ರಾಜ್ಯದ ವಿವಿಧ ಭಾಗಗಳಲ್ಲಿ ಕೋಮು ಸೌಹಾರ್ದತೆಯನ್ನು ಕದಡಲು ಮಾಡುತ್ತಿರುವ ಎಲ್ಲಾ ಪ್ರಯತ್ನಗಳನ್ನು ನಿಗ್ರಹಿಸಬೇಕಾದ ಅಗತ್ಯತೆಯನ್ನು ಮನಗಂಡಿದೆ. ಅಂಥ ಘಟನೆಗಳಿಗೆ ಪ್ರಚೋದನೆ ನೀಡುತ್ತಿರುವ ಸಾಮಾಜಿಕ ಮಾಧ್ಯಮದ ಪಾತ್ರವನ್ನು ಮೇಲ್ವಿಚಾರಣೆ ಮಾಡಬೇಕಾಗಿದೆ ಮತ್ತು ಸರ್ಕಾರವು ಕೋಮು ಸೌಹಾರ್ದತೆಯನ್ನು ಕಾಪಾಡಿಕೊಂಡು ಬರುವಲ್ಲಿ ಎದುರಾಗುವ ಯಾವುದೇ ಅಡ್ಡಿ–ಆತಂಕಗಳನ್ನು ನಿಗ್ರಹಿಸಲು ತತ್‌ಕ್ಷಣದ, ಪರಿಣಾಮಕಾರಿಯಾದ ಹಾಗೂ ನಿಷ್ಪಕ್ಷಪಾತವಾದ ಆಡಳಿತ ಕ್ರಮವನ್ನು ಕೈಗೊಳ್ಳುತ್ತಾ ಬಂದಿರುತ್ತದೆ. ನನ್ನ ಸರ್ಕಾರವು ಎಲ್ಲಾ ನಾಗರಿಕರಿಗೆ, ಅದರಲ್ಲೂ ನಿರ್ದಿಷ್ಟವಾಗಿ ದುರ್ಬಲವರ್ಗದ ಜನರಿಗೆ ಸುರಕ್ಷತೆ ಮತ್ತು ಭದ್ರತೆಯನ್ನು ಒದಗಿಸುವ ಅಗತ್ಯತೆಯನ್ನು ಗುರುತಿಸಿದೆ. ಸರ್ಕಾರವು ಮಹಿಳೆಯರ ವಿರುದ್ಧದ ಪ್ರಕರಣಗಳ ತ್ವರಿತ ವಿಲೇವಾರಿಗಾಗಿ 10 ವಿಶೇಷ ನ್ಯಾಯಾಲಯಗಳನ್ನು ಸ್ಥಾಪಿಸುವುದಕ್ಕೆ ಅನುಮೋದನೆ ನೀಡಿದೆ. ರಾಜ್ಯವು ಅಪರಾಧ ಮತ್ತು ಅಪರಾಧ ಪತ್ತೆಹಚ್ಚುವಿಕೆ ಮತ್ತು ಅಪರಾಧ ಜಾಲ ವ್ಯವಸ್ಥೆಗಳನ್ನು ಅನುಷ್ಠಾನಗೊಳಿಸುವಲ್ಲಿ ತ್ವರಿತ

ಪ್ರಗತಿಯನ್ನು ಸಾಧಿಸಿದೆ. ಈ ವ್ಯವಸ್ಥೆಯಿಂದ ಅಧಿಕೃತ ವ್ಯಕ್ತಿಗಳಿಗೆ ಯಾವುದೇ ಸಮಯದಲ್ಲಿ ಮತ್ತು ಎಲ್ಲಿಂದಲಾದರೂ ಪ್ರಥಮ ಮಾಹಿತಿ ವರದಿ (ಎಫ್‌ಐಆರ್)ಯಿಂದ ಹಿಡಿದು ಆರೋಪ ಪಟ್ಟಿಯವರೆಗೆ ಎಲ್ಲಾ ದಾಖಲೆಗಳನ್ನು ಪಡೆಯಲಿಕ್ಕೆ ಸಾಧ್ಯವಾಗುತ್ತದೆ. ಕರ್ನಾಟಕವು ಸಕಾಲಕ್ಕೆ ಪ್ರಥಮ ಮಾಹಿತಿ ವರದಿಗಳು (ಎಫ್‌ಐಆರ್‌ಗಳು) ಮತ್ತು ಆರೋಪ ಪಟ್ಟಿಗಳು ಮುಕ್ತವಾಗಿ ಲಭ್ಯವಾಗುವಂತೆ ಮಾಡುವ ನಿಟ್ಟಿನಲ್ಲಿ ಪೊಲೀಸ್ ಠಾಣೆಗಳನ್ನು ಕೋರ್ಟ್‌ಗಳೊಂದಿಗೆ ಜೋಡಿಸಿರುವ ರಾಷ್ಟ್ರದಲ್ಲಿಯೇ ಪ್ರಪ್ರಥಮ ರಾಜ್ಯವಾಗಿದೆ. ರಾಜ್ಯವು ಪೊಲೀಸ್ ಸಿಬ್ಬಂದಿಯ ಕಲ್ಯಾಣಕ್ಕಾಗಿ ಕೂಡ ನಿಶ್ಚಿತವಾದ ಕ್ರಮಗಳನ್ನು ಕೈಗೊಂಡಿದೆ.

5. **"ಮಾನವ ಅಭಿವೃದ್ಧಿಯಲ್ಲಿನ ಅಸಮಾನತೆಗಳನ್ನು ನಿವಾರಿಸುವೆಡೆಗೆ"** ಎಂಬ ಸಂಯುಕ್ತ ರಾಷ್ಟ್ರ ಅಭಿವೃದ್ಧಿ ಯೋಜನೆ (ಯುಎನ್‌ಡಿಪಿ) ಮತ್ತು ಕೇಂದ್ರ ಯೋಜನಾ ಆಯೋಗದ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ರಾಜ್ಯ ಮಟ್ಟದ ಚಾಲನಾ ಸಮಿತಿಯನ್ನು ರಚಿಸಲಾಗಿದೆ. 2014–15ರ ವೇಳೆಗೆ ರಾಜ್ಯ ಮಾನವಾಭಿವೃದ್ಧಿ ವರದಿಯ ಕರಡನ್ನು ಸಿದ್ಧಪಡಿಸಲಾಗುವುದು. 2013–14ನೇ ಸಾಲಿನಲ್ಲಿ, ಏಕಕಾಲಕ್ಕೆ ರಾಜ್ಯದ ಎಲ್ಲಾ ಜಿಲ್ಲಾ ಮಾನವಾಭಿವೃದ್ಧಿ ವರದಿಗಳನ್ನು ಪ್ರಕಟಿಸುವ ಉದ್ದೇಶ ಹೊಂದಿದೆ. ಇದಕ್ಕಾಗಿ, ಲೀಡ್ ಏಜೆನ್ಸಿಗಳನ್ನು ಗುರುತಿಸಲಾಗಿದೆ. ನಿಯತ ಪರಿಶೀಲನೆ ಮತ್ತು ಮೇಲ್ವಿಚಾರಣೆಯ ಮೂಲಕ ಗುಣಮಟ್ಟ ಮತ್ತು ಸ್ಥಿರತೆಯನ್ನು ಖಚಿತಪಡಿಸಿಕೊಳ್ಳಲು ಗುಣಮಟ್ಟ ಮೇಲ್ವಿಚಾರಣಾ ತಂಡವನ್ನು ರಚಿಸಲಾಗಿದೆ.

6. ನನ್ನ ಸರ್ಕಾರವು, ಹೈದರಾಬಾದ್–ಕರ್ನಾಟಕ ಪ್ರದೇಶದಲ್ಲಿ ಅಭಿವೃದ್ಧಿಯ ಹೊಸ ಪರ್ವವನ್ನು ಸಾರುವುದಕ್ಕೆ ನಾಂದಿಯಾಗುವಲ್ಲಿ ಯಶಸ್ವಿಯಾಗಿದೆ. ರಾಜ್ಯ ಸರ್ಕಾರದ ಅವಿರತ ಪ್ರಯತ್ನಗಳಿಂದಾಗಿ, ಕೇಂದ್ರ ಸರ್ಕಾರವು ಹೈದರಾಬಾದ್–ಕರ್ನಾಟಕ ಪ್ರದೇಶಕ್ಕೆ ವಿಶೇಷ

ಸ್ಥಾನಮಾನವನ್ನು ನೀಡಿದೆ. ಅದರಂತೆ, ನನ್ನ ಸರ್ಕಾರವು ಭಾರತ ಸಂವಿಧಾನದ ಅನುಚ್ಛೇದ 371(ಜೆ)ಅನ್ನು ಅನುಷ್ಠಾನಗೊಳಿಸಲು ದಿನಾಂಕ 24.10.2013ರಂದು ಆದೇಶಗಳನ್ನು ಹೊರಡಿಸಿದೆ. ಹೈದರಾಬಾದ್–ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯು ಪ್ರಸ್ತುತ ಅಸ್ತಿತ್ವಕ್ಕೆ ಬಂದಿದೆ. ಈ ಪ್ರದೇಶದ ಸರ್ವಾಂಗೀಣ ಅಭಿವೃದ್ಧಿಯನ್ನು ಖಚಿತಪಡಿಸಿಕೊಳ್ಳುವುದಕ್ಕಾಗಿ ಉದ್ಯೋಗ ಹಾಗೂ ಶಿಕ್ಷಣದಲ್ಲಿ ಮೀಸಲಾತಿಯನ್ನು ಕಲ್ಪಿಸಲು ಕರಡು ನಿಯಮಗಳನ್ನು ಅಧಿಸೂಚಿಸಲಾಗಿದೆ.

7. ನನ್ನ ಸರ್ಕಾರವು, ಎಲ್ಲಾ ಅವಕಾಶ ವಂಚಿತ ಸಮೂಹಗಳ ಹಾಗೂ ದುರ್ಬಲ ವರ್ಗಗಳ ಕಾನೂನುಸಮ್ಮತ ಮತ್ತು ಸಾಂವಿಧಾನಿಕ ಹಕ್ಕುಗಳನ್ನು ಸಂರಕ್ಷಿಸಲು ಬದ್ಧವಾಗಿದೆ. ಈ ನಿಟ್ಟಿನಲ್ಲಿ ಸಮಾಜ ಕಲ್ಯಾಣ, ಹಿಂದುಳಿದ ವರ್ಗಗಳು ಹಾಗೂ ಅಲ್ಪಸಂಖ್ಯಾತರ ಇಲಾಖೆಗಳ ಕಾರ್ಯಕ್ರಮಗಳಿಗೆ ಸರ್ವ ರೀತಿಯಿಂದಲೂ ಪ್ರಥಮ ಆದ್ಯತೆ ನೀಡಲಾಗಿದೆ. ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದವರ ಜನಸಂಖ್ಯೆಗನುಗುಣವಾಗಿ ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ಪಂಗಡದ ಉಪಯೋಜನೆಗಾಗಿ ರಾಜ್ಯ ಯೋಜನಾ ವೆಚ್ಚದ ಪಾಲನ್ನು ಮೀಸಲಿರಿಸುವುದಕ್ಕಾಗಿ "ಕರ್ನಾಟಕ ಪರಿಶಿಷ್ಟ ಜಾತಿಗಳ ಉಪ ಯೋಜನೆ ಮತ್ತು ಬುಡಕಟ್ಟು ಉಪ ಯೋಜನೆ (ಯೋಜನೆ ರೂಪಿಸುವುದು, ಹಂಚಿಕೆ ಮತ್ತು ಆರ್ಥಿಕ ಸಂಪನ್ಮೂಲಗಳ ಬಳಕೆ) ಅಧಿನಿಯಮ–2013" ನ್ನು ಜಾರಿಗೆ ತರಲಾಗಿದೆ ಮತ್ತು ಈ ಅಧಿನಿಯಮವು ಉಪಯೋಜನೆಯ ಆಯವ್ಯಯ, ಅನುಷ್ಠಾನ ಮತ್ತು ಮೇಲ್ವಿಚಾರಣೆಗೆ ಸಾಂಸ್ಥಿಕ ವ್ಯವಸ್ಥೆಯನ್ನು ಒದಗಿಸುತ್ತದೆ. ಇದು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಕಲ್ಯಾಣಕ್ಕಾಗಿ ಮೀಸಲಿಟ್ಟಿರುವ ಯೋಜನಾನಿಧಿಯನ್ನು ಸಾಕಷ್ಟು ಹಾಗೂ ಪರಿಣಾಮಕಾರಿಯಾಗಿ ಉಪಯೋಗಿಸಿಕೊಳ್ಳುವ ಭರವಸೆ ಮೂಡಿಸುವಲ್ಲಿ ಬಹುದೂರ ಸಾಗುತ್ತದೆ.

8. ಸರ್ಕಾರಿ ಹಾಸ್ಟೆಲ್‌ಗಳಲ್ಲಿ ಪ್ರವೇಶ ಸಿಗದ ಇತರೆ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಪ್ರತಿ ತಿಂಗಳು ₹ 1,500/- ವಿದ್ಯಾರ್ಥಿ ವೇತನವನ್ನು ನೀಡಲು "ವಿದ್ಯಾ ಸಿರಿ" ಎಂಬ ನೂತನ ಯೋಜನೆಯನ್ನು ಪ್ರಾರಂಭಿಸಲಾಗಿದೆ.
9. ನನ್ನ ಸರ್ಕಾರವು, ಬಡವರ ಆಹಾರ ಭದ್ರತೆಗೆ ಹೆಚ್ಚಿನ ಆದ್ಯತೆಯನ್ನು ನೀಡಿದೆ. ರಾಷ್ಟ್ರೀಯ ಆಹಾರ ಅಧಿನಿಯಮವನ್ನು ರಾಜ್ಯದಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ. "ಅನ್ನ ಭಾಗ್ಯ" ಯೋಜನೆಯಡಿಯಲ್ಲಿ, 86.35 ಲಕ್ಷ ಬಿಪಿಎಲ್ ಪಡಿತರ ಚೀಟಿದಾರರು ಮತ್ತು "ಅಂತ್ಯೋದಯ ಅನ್ನ ಯೋಜನೆ"ಯಡಿಯಲ್ಲಿ 11.01 ಲಕ್ಷ ಪಡಿತರಚೀಟಿದಾರರು ಈವರೆಗೆ ಪ್ರಯೋಜನ ಪಡೆದಿದ್ದಾರೆ. ತಿಂಗಳ ಮೊದಲ 10 ದಿನಗಳಲ್ಲಿ ತಮ್ಮ ಪಡಿತರವನ್ನು ಪಡೆಯಲಿಕ್ಕೆ ಸಾರ್ವಜನಿಕರಿಗೆ ಸಾಧ್ಯವಾಗುವಂತೆ ಮಾಡಲು 2014ರ ಫೆಬ್ರವರಿಯಿಂದ "ಪಡಿತರ ಖಾತ್ರಿ" ಯೋಜನೆಯನ್ನು ಜಾರಿಗೆ ತರಲಾಗುವುದು. ಈ ಕ್ರಮವು, ಫಲಾನುಭವಿಗಳಿಗೆ ನಿಶ್ಚಿತ ಕಾಲಾವಧಿಯಲ್ಲಿ ಆಹಾರ ಧಾನ್ಯವನ್ನು ಪಡೆಯುವ ಭರವಸೆಯನ್ನು ಕಲ್ಪಿಸುತ್ತದೆ. ಕರ್ನಾಟಕ ರಾಜ್ಯವು ಸಾರ್ವಜನಿಕ ವಿತರಣಾ ವ್ಯವಸ್ಥೆಯ ಮೂಲಕ ರಾಗಿ ಮತ್ತು ಜೋಳ ವಿತರಣೆಯನ್ನು ಜಾರಿಗೆ ತಂದ ಮೊಟ್ಟಮೊದಲ ರಾಜ್ಯವಾಗಿದೆ.
10. ಶಾಲಾ ಮಕ್ಕಳ ಪೌಷ್ಟಿಕಾಂಶದ ಮಟ್ಟಗಳನ್ನು ಸುಧಾರಿಸುವ ನಿಟ್ಟಿನಲ್ಲಿ, ನನ್ನ ಸರ್ಕಾರವು, ಸುಮಾರು 61 ಲಕ್ಷ ವಿದ್ಯಾರ್ಥಿಗಳಿಗೆ ಹಾಗೂ 40 ಲಕ್ಷ ಅಂಗನವಾಡಿ ಮಕ್ಕಳಿಗೆ ದಿನ ಬಿಟ್ಟು ದಿನ ಹಾಲು ಒದಗಿಸಲು "ಕ್ಷೀರ ಭಾಗ್ಯ" ಯೋಜನೆಯನ್ನು ಜಾರಿಗೆ ತಂದಿದೆ.
11. ನನ್ನ ಸರ್ಕಾರವು ಬಡತನ ರೇಖೆಗಿಂತ ಕೆಳಗಿರುವ ಎಲ್ಲಾ ಅರ್ಹ ಫಲಾನುಭವಿಗಳಿಗೆ ಸಾಮಾಜಿಕ ಭದ್ರತೆಯನ್ನು ಒದಗಿಸಲು ಬದ್ಧವಾಗಿದೆ. ವಿವಿಧ ಪಿಂಚಣಿ ವರ್ಗಗಳಡಿ 35 ಲಕ್ಷ ಫಲಾನುಭವಿಗಳಿಗೆ ಪಿಂಚಣಿಗಳನ್ನು ಮಂಜೂರು ಮಾಡಿ

ವಿತರಿಸಲಾಗುತ್ತಿದೆ. ನೂತನವಾಗಿ ಜಾರಿಗೊಳಿಸಲಾದ "ಮನಸ್ವಿನಿ" ಹಾಗೂ "ಮೈತ್ರಿ" ಎಂಬ ಯೋಜನೆಗಳು ಉದ್ದೇಶಿತ ಸಮೂಹಗಳಲ್ಲಿ ಅತ್ಯಂತ ಜನಪ್ರಿಯವಾಗಿವೆ. ನನ್ನ ಸರ್ಕಾರವು, ಪ್ರಸಕ್ತ ಆರ್ಥಿಕ ವರ್ಷದಲ್ಲಿ ಸ್ವಾತಂತ್ರ್ಯ ಹೋರಾಟಗಾರರ ಪಿಂಚಣಿ/ಕುಟುಂಬ ಪಿಂಚಣಿಯ ಪ್ರಮಾಣವನ್ನು ಹೆಚ್ಚಿಸಿದೆ. ಹೋಬಳಿ ಮಟ್ಟದಲ್ಲಿ ಪಿಂಚಣಿ (ಪೆನ್‌ಷನ್) ಅದಾಲತನ್ನು ನಡೆಸುವ ವಿನೂತನ ಯೋಜನೆಯು ದೊಡ್ಡ ಪ್ರಮಾಣದಲ್ಲಿ ಅರ್ಹ ಪಿಂಚಣಿದಾರರಿಗೆ ಸಹಾಯವಾಗಿದೆ ಮತ್ತು ಈಗ ಅವರು ತಾಲ್ಲೂಕು ಕಚೇರಿಗಳಿಗೆ ಅಲೆಯಬೇಕಾದ ಅವಶ್ಯಕತೆ ಇರುವುದಿಲ್ಲ.

12. ಒಟ್ಟಾರೆ ಸಾರ್ವಜನಿಕರ ಹಿತವನ್ನು ದೃಷ್ಟಿಯಲ್ಲಿಟ್ಟುಕೊಂಡು ಕಂದಾಯ ಇಲಾಖೆಯಲ್ಲಿ ಸಾಕಷ್ಟು ಸುಧಾರಣೆಗಳನ್ನು ತರಲಾಗಿದೆ. ಭೂ ಮಂಜೂರಾತಿ ಅಧಿನಿಯಮದಡಿ ಸ್ಥಾಪಿಸಲಾದ ಸಮಿತಿಯನ್ನು ತಾಲ್ಲೂಕುವಾರಿಗೆ ಬದಲಾಗಿ ವಿಧಾನಸಭಾ ಕ್ಷೇತ್ರವಾರು ಆಧಾರದ ಮೇಲೆ ಪುನರ್ ರಚಿಲಾಗಿದೆ. ಕರ್ನಾಟಕ ಭೂ ಸುಧಾರಣಾ ಅಧಿನಿಯಮ, 1961ರ ಮೇರೆಗಿನ 109ನೇ ಪ್ರಕರಣದ ಉಪಬಂಧವನ್ನು ಸರಳೀಕರಣಗೊಳಿಸಬೇಕಾಗಿದೆ. ದಿನಾಂಕ 01.01.2014 ರಂದು ಭೂ ಸ್ವಾಧೀನತೆಯಲ್ಲಿ ನ್ಯಾಯೋಚಿತ ಪರಿಹಾರಕ್ಕೆ ಹಕ್ಕು ಮತ್ತು ಪುನರ್ವಸತಿ ಹಾಗೂ ಪುನರ್ ವ್ಯವಸ್ಥೆಯಲ್ಲಿ ಪಾರದರ್ಶಕತೆ ಅಧಿನಿಯಮ, 2013 ಜಾರಿಗೆ ಬಂದಿರುತ್ತದೆ. 250 ಜನಸಂಖ್ಯೆಯನ್ನೊಳಗೊಂಡ ಗೊಲ್ಲರ ಹಟ್ಟಿ, ತಾಂಡಾ ಮತ್ತು ಮಜಿರೆಗಳಂಥ ಸಣ್ಣ ಹಳ್ಳಿಗಳನ್ನು ಅವುಗಳ ಸಾಮಾಜಿಕ-ಆರ್ಥಿಕ ಅಭಿವೃದ್ಧಿಗೆ ಉತ್ತೇಜನ ನೀಡುವ ಸಲುವಾಗಿ ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸಲು ಆದೇಶಗಳನ್ನು ಹೊರಡಿಸಲಾಗಿದೆ.

13. ರಾಜ್ಯವು ತೀವ್ರ ಬರಗಾಲದಿಂದ ತತ್ತರಿಸುತ್ತಿದೆ ಮತ್ತು 98 ತಾಲ್ಲೂಕುಗಳನ್ನು ಬರಗಾಲಪೀಡಿತ ತಾಲ್ಲೂಕುಗಳೆಂದು ಘೋಷಿಸಲಾಗಿದೆ. ಕೇಂದ್ರದ ಹಾಗೂ ರಾಜ್ಯದ ನಿಧಿಗಳನ್ನು ಬಳಸಿಕೊಂಡು ಸಮರೋಪಾದಿಯಲ್ಲಿ ಬರಗಾಲ ಉಪಶಮನ ಪ್ರಯತ್ನಗಳನ್ನು ಕೈಗೊಳ್ಳಲಾಗಿದೆ.

14. ಸುರಕ್ಷಿತ ಕುಡಿಯುವ ನೀರನ್ನು ಒದಗಿಸುವುದು ಸದಾ ನನ್ನ ಸರ್ಕಾರದ ಪರಮೋಚ್ಚ ಆದ್ಯತೆಯಾಗಿದೆ. ಈ ಉದ್ದೇಶಕ್ಕಾಗಿ, ಭಾರತ ಸರ್ಕಾರದ ನೆರವಿನೊಂದಿಗೆ ಅನೇಕ ಬಹುಗ್ರಾಮ ಯೋಜನೆಗಳನ್ನು ಪ್ರಾರಂಭಿಸಲಾಗಿದೆ. ಕಳೆದ ಎಂಟು ತಿಂಗಳಲ್ಲಿ, ಫ್ಲೋರೈಡ್, ಆರ್ಸೆನಿಕ್‌ನಿಂದ ನೀರು ಕಲುಷಿತಗೊಂಡಿರುವ 1000 ಹಳ್ಳಿಗಳನ್ನು ಗುರುತಿಸಲಾಗಿದ್ದು, ಅವುಗಳಿಗೆ ಶುದ್ಧ ಕುಡಿಯುವ ನೀರು ಪೂರೈಕೆಗೆ ವ್ಯವಸ್ಥೆ ಮಾಡಲಾಗಿದೆ. ವಿಶೇಷವಾಗಿ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಗೆ ಹೊಸದಾಗಿ ಸೇರ್ಪಡೆಗೊಳಿಸಿರುವ 110 ಹಳ್ಳಿಗಳಿಗೆ ಕಾವೇರಿ ನದಿಯಿಂದ ಕುಡಿಯುವ ನೀರನ್ನು ಒದಗಿಸಲು ಒಂದು ಹೊಸ ಯೋಜನೆ ರೂಪಿಸಲಾಗಿದೆ.

15. ಅಂತರ್ಜಲದ ಮರುಪೂರಣವನ್ನು ಸುಧಾರಿಸಲು 12 ಸಾವಿರ ನೀರಿನ ಕೆರೆಗಳನ್ನು ಪುನರುಜ್ಜೀವನಗೊಳಿಸಲು ಕ್ರಮಗಳನ್ನು ಕೈಗೊಳ್ಳಲಾಗಿದೆ. ತಾಂತ್ರಿಕ ಸಿಬ್ಬಂದಿಯ ಕೊರತೆಯನ್ನು ನೀಗಿಸುವ ಸಲುವಾಗಿ ಗುತ್ತಿಗೆ ಆಧಾರದ ಮೇಲೆ ಸುಮಾರು 1,000 ಇಂಜಿನಿಯರುಗಳನ್ನು/ಕೃಷಿ ಪದವೀಧರರನ್ನು ನಿಯೋಜಿಸಿಕೊಳ್ಳುವ ಪ್ರಕ್ರಿಯೆಯನ್ನು ಪ್ರಾರಂಭಿಸಲಾಗಿದೆ.

16. ನನ್ನ ಸರ್ಕಾರವು ರಾಜ್ಯದಲ್ಲಿನ ನೀರಾವರಿ ಬೆಳೆಗಳಿಗೆ ನೀರನ್ನು ಪೂರೈಕೆ ಮಾಡುವ ಸಲುವಾಗಿ ಬೃಹತ್ ನೀರಾವರಿ ಯೋಜನೆಗಳನ್ನು ಕೈಗೆತ್ತಿಕೊಳ್ಳಲು ಸಾಕಷ್ಟು ನಿಧಿಗಳನ್ನು ಒದಗಿಸಿದೆ. ಕೃಷ್ಣಾ ಕಣಿವೆಯ ನೀರಿನ ಹಂಚಿಕೆಗೆ ಸಂಬಂಧಿಸಿದಂತೆ ಘನ ನ್ಯಾಯಾಧಿಕರಣವು ಸ್ಪಷ್ಟೀಕರಣ ಆದೇಶ ಹೊರಡಿಸಿದೆ. ಈ ಹಿನ್ನೆಲೆಯಲ್ಲಿ, ಕೃಷ್ಣಾ ಮೇಲ್ದಂಡೆ ಮೂರನೇ ಹಂತದ ಯೋಜನಾ ಕಾಮಗಾರಿಗಳನ್ನು ಆದ್ಯತೆಯ ಮೇಲೆ ಕೈಗೊಳ್ಳಲಾಗುವುದು. ಅಲ್ಲದೆ, ಬರಪೀಡಿತ ಪ್ರದೇಶಗಳಾದ ಕೋಲಾರ ಮತ್ತು ಚಿಕ್ಕಬಳ್ಳಾಪುರಗಳಿಗೆ ಕುಡಿಯುವ ನೀರನ್ನು ಒದಗಿಸಲು "ಎತ್ತಿನಹೊಳೆ" ಯೋಜನೆಯನ್ನು ಕೈಗೆತ್ತಿಕೊಳ್ಳಲಾಗುವುದು. ನನ್ನ ಸರ್ಕಾರವು ₹ 3,750/- ಕೋಟಿ

ವೆಚ್ಚದಲ್ಲಿ ನಾರಾಯಣಪುರ ಎಡದಂಡೆ ಕಾಲುವೆಯ ವಿಸ್ತರಣೆ, ನವೀಕರಣ ಮತ್ತು ಆಧುನೀಕರಣ ಯೋಜನೆ ಕೈಗೊಳ್ಳಲು ಕೇಂದ್ರ ಸರ್ಕಾರದ ಅನುಮೋದನೆಯನ್ನು ಪಡೆಯಲು ಸಫಲವಾಗಿದೆ. ರಾಷ್ಟ್ರೀಯ ಜಲ ಮಿಷನ್ ಅಡಿಯಲ್ಲಿ 2560 ಕೋಟಿ ರೂಪಾಯಿಗಳ ವೆಚ್ಚದಲ್ಲಿ ತುಂಗಾ ಮೇಲ್ದಂಡೆ ಯೋಜನೆಗೆ ಅನುಮೋದನೆಯನ್ನು ಸಹ ಪಡೆದಿದ್ದೇವೆ.

17. ನನ್ನ ಸರ್ಕಾರವು, ರಾಸಾಯನಿಕ ಗೊಬ್ಬರಗಳ ಬಳಕೆಯನ್ನು ಸರಿದೂಗಿಸುತ್ತಾ ಮಣ್ಣನ್ನು ಸೂಕ್ಷ್ಮ ಪೌಷ್ಟಿಕಾಂಶಗಳಿಂದ ಫಲವತ್ತಾಗಿಸಲು ರಾಜ್ಯದಲ್ಲಿ "ಭೂ-ಚೇತನ" ಯೋಜನೆಯನ್ನು ಅತ್ಯಂತ ಯಶಸ್ವಿಯಾಗಿ ನಿರ್ವಹಿಸುತ್ತಿದೆ. ನಾವು ಈ ವರ್ಷ "ಭೂ ಚೇತನ್" ಪ್ಲಸ್ ಯೋಜನೆಯನ್ನು ಪ್ರಾರಂಭಿಸಿದ್ದು, ಇದು ರೈತರಿಗೆ ಉತ್ತಮ ಮೌಲ್ಯವನ್ನು ಕಲ್ಪಿಸುವ ದೃಷ್ಟಿಯಿಂದ ಎಲ್ಲಾ ಭೂ ಆಧಾರಿತ ಇಲಾಖೆಗಳ ಕಾರ್ಯಚಟುವಟಿಕೆಗಳನ್ನು ಇದರ ವ್ಯಾಪ್ತಿಗೆ ತರಲು ಉದ್ದೇಶಿಸಲಾಗಿದೆ. ನನ್ನ ಸರ್ಕಾರವು ಮಳೆ ಆಧಾರಿತ ಕೃಷಿಯ ಉತ್ಪಾದಕತೆಯನ್ನು ಹೆಚ್ಚಿಸಲು ಕಟಿಬದ್ಧವಾಗಿದೆ. ಈ ದಿಶೆಯಲ್ಲಿ, ಐಸಿಆರ್‌ಐಎಸ್‌ಎಟಿ (ICRISAT) ನೊಂದಿಗೆ ಒಪ್ಪಂದ ಮಾಡಿಕೊಂಡು 69 ಲಕ್ಷ ಹೆಕ್ಟೇರ್ ಖುಷ್ಕಿ ಭೂಮಿಯಲ್ಲಿ ಸುಧಾರಿತ ಕೃಷಿ ಪದ್ಧತಿಯನ್ನು ಅಳವಡಿಸಿಕೊಳ್ಳಲಾಗಿದೆ.

18. ರೈತರು ಕಡಿಮೆ ಬೆಲೆಗೆ ತಮ್ಮ ಉತ್ಪನ್ನಗಳನ್ನು ಮಾರಾಟ ಮಾಡುವುದನ್ನು ತಪ್ಪಿಸಲು, ಕೃಷಿ ಮಾರುಕಟ್ಟೆ ಇಲಾಖೆಯಿಂದ ಮೂಲ ಸೌಲಭ್ಯ ಒದಗಿಸಲು ಹಾಗೂ ರೈತರಿಂದ ಪದಾರ್ಥಗಳನ್ನು ಖರೀದಿಸಲು ವ್ಯವಸ್ಥಿತವಾದ ಮಾರುಕಟ್ಟೆ ಪದ್ಧತಿಯೊಂದಿಗೆ ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ) ಹಾಗೂ ಪ್ರೋತ್ಸಾಹಧನ ನೀಡಲಾಗುತ್ತದೆ. ಕೃಷಿ ಮಾರುಕಟ್ಟೆ ಸುಧಾರಣಾ ಸಮಿತಿ ಸಲ್ಲಿಸಿದ ವರದಿಯನ್ನಾಧರಿಸಿ ಮತ್ತು ಕರ್ನಾಟಕ ಕೃಷಿ ಮಾರುಕಟ್ಟೆ ನೀತಿ-2013ರ ಪ್ರಕಾರ ಸುಧಾರಣಾ ಕ್ರಮಗಳನ್ನು ಅಳವಡಿಸಿಕೊಳ್ಳಲು ಮತ್ತು

ಕರ್ನಾಟಕ ಕೃಷಿ ಮಾರುಕಟ್ಟೆ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ, 1966 ಹಾಗೂ ನಿಯಮಗಳು, 1968ಕ್ಕೆ ಸೂಕ್ತ ತಿದ್ದುಪಡಿಗಳನ್ನು ತರಲು ಕ್ರಮ ಕೈಕೊಳ್ಳಲಾಗಿದೆ.

19. ರೈತನು ದೇಶದ ಬೆನ್ನೆಲುಬಾಗಿದ್ದರೆ, ಪಶುಸಂಗೋಪನೆಯು ರೈತನ ಆರ್ಥಿಕತೆಯ ಬೆನ್ನೆಲುಬಾಗಿದೆ. ಹೈನುಗಾರಿಕೆಗೆ ಉತ್ತೇಜನ ನೀಡಲು ಮತ್ತು ರಾಜ್ಯದಲ್ಲಿನ ರೈತರ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಲು, ಪ್ರತಿ ಲೀಟರ್ ಹಾಲಿಗೆ ನೀಡುತ್ತಿದ್ದ 2 ರೂಪಾಯಿಗಳ ಪ್ರೋತ್ಸಾಹಕ ಧನವನ್ನು ಪ್ರತಿ ಲೀಟರ್ ಹಾಲಿಗೆ 4 ರೂ.ಗಳಿಗೆ ಹೆಚ್ಚಿಸಲಾಗಿದೆ. ಸರ್ಕಾರವು ರಾಜ್ಯದಲ್ಲಿ ಕಾಣಿಸಿಕೊಂಡ ಕಾಲು–ಬಾಯಿ ರೋಗದ ಕಾರಣದಿಂದ ತಮ್ಮ ಜಾನುವಾರುಗಳನ್ನು ಕಳೆದುಕೊಂಡ ರೈತರಿಗೆ ಪರಿಹಾರವನ್ನು ಕೂಡ ನೀಡುತ್ತಿದೆ. ನನ್ನ ಸರ್ಕಾರವು, ಸಾಂಕ್ರಾಮಿಕ ರೋಗಗಳಿಂದ ರೈತರ ಜಾನುವಾರುಗಳನ್ನು ಮುಕ್ತಗೊಳಿಸಲು ಅನೇಕ ಯೋಜನೆಗಳನ್ನು ಕೈಗೊಂಡಿದೆ. ಇದರ ಜೊತೆಗೆ, ಹೊಸ ಪಶು ವೈದ್ಯಕೀಯ ಆಸ್ಪತ್ರೆಗಳು ಮತ್ತು ಪಶುಚಿಕಿತ್ಸಾಲಯಗಳ ಆಧುನೀಕರಣ ಮತ್ತು ನಿರ್ಮಾಣ ಕಾರ್ಯವನ್ನು ದೊಡ್ಡ ಪ್ರಮಾಣದಲ್ಲಿ ಕೈಗೊಳ್ಳಲಾಗುತ್ತಿದೆ. ಜಾನುವಾರುಗಳಿಗೆ ಹೈ–ಟೆಕ್ ಚಿಕಿತ್ಸಾ ಸೌಲಭ್ಯವನ್ನು ಕಲ್ಪಿಸಲು ಪ್ರತಿಯೊಂದು ಕಂದಾಯ ವಿಭಾಗದಲ್ಲಿ ಒಂದು ಸ್ಪೆಷಾಲಿಟಿ ಆಸ್ಪತ್ರೆಯನ್ನು ಹಾಗೂ ಬೆಂಗಳೂರಿನಲ್ಲಿ ಒಂದು ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ.

20. ಮೀನುಗಾರಿಕೆ ಇಲಾಖೆಯು ಆದಾಯ, ಉದ್ಯೋಗ ಮತ್ತು ವಿದೇಶೀ ವಿನಿಮಯವನ್ನು ದೊರಕಿಸಿಕೊಡುವುದರ ಜೊತೆಗೆ ಜನರಿಗೆ ಉತ್ತಮ ಗುಣಮಟ್ಟದ ಪೌಷ್ಟಿಕ ಆಹಾರವನ್ನೂ ಸಹ ಒದಗಿಸುತ್ತಿದೆ. ನನ್ನ ಸರ್ಕಾರವು ಕರಾವಳಿ ಮೀನುಗಾರಿಕೆಯನ್ನು ಉತ್ತೇಜಿಸಲು ಕರ್ನಾಟಕ ಮೀನುಗಾರಿಕೆ ಬಂದರು ಮತ್ತು ನಿಲುಗಡೆ ಕೇಂದ್ರಗಳಿಗೆ ಸಂಬಂಧಿಸಿದ ಕರಾವಳಿ ಸಿವಿಲ್ ಕಾಮಗಾರಿಗಳನ್ನು ತ್ವರಿತಗೊಳಿಸುವುದಕ್ಕೆ ಒಂದು ಯೋಜನಾ ಅನುಷ್ಠಾನ ಕೋಶವನ್ನು ಸ್ಥಾಪಿಸಲು ಯೋಜಿಸಿದೆ.

21. ನಮ್ಮ ರಾಜ್ಯವು ಶಿಶು ಮರಣ ಪ್ರಮಾಣಕ್ಕೆ ಸಂಬಂಧಿಸಿದಂತೆ ಈ ವರ್ಷ ಮಿಲೆನಿಯಮ್ ಅಭಿವೃದ್ಧಿ ಗುರಿಗಳನ್ನು ಸಾಧಿಸಿದೆ. ಭಾರತದಲ್ಲಿ 5 ವರ್ಷಗಳಿಗಿಂತ ಕಡಿಮೆ ವಯಸ್ಸಿನವರ ಮರಣ ಪ್ರಮಾಣ 52 ಮತ್ತು ಶಿಶು ಮರಣ ಪ್ರಮಾಣ 42 ಆದರೆ, ಕರ್ನಾಟಕವು ಇದನ್ನು ಅನುಕ್ರಮವಾಗಿ 37 ಮತ್ತು 32ಕ್ಕೆ ತಗ್ಗಿಸಲು ಸಫಲವಾಗಿದೆಯೆಂದು ತಮಗೆ ತಿಳಿಸಲು ನನಗೆ ಸಮತೋಷವೆನಿಸುತ್ತದೆ. ನಮ್ಮ ರಾಜ್ಯದಲ್ಲಿ ಪ್ರಪ್ರಥಮವಾಗಿ ಸರ್ವರನ್ನೂ ಒಳಗೊಳ್ಳುವಂಥ ಆರೋಗ್ಯ ಯೋಜನೆಯಾದ "ರಾಜೀವ್ ಆರೋಗ್ಯ ಭಾಗ್ಯ" ಎಂಬ ಆರೋಗ್ಯ ಭರವಸೆ ವಿಮಾ ಯೋಜನೆಯನ್ನು ರಾಜ್ಯದ ಎ.ಪಿ.ಎಲ್ ಕುಟುಂಬದವರ ಸಲುವಾಗಿ ಜಾರಿಗೆ ತರಲಾಗಿದೆ. ರಾಜ್ಯಾದ್ಯಂತ ಆರೋಗ್ಯ ಮಾಹಿತಿ ಮತ್ತು ಆರೋಗ್ಯ ಸೇವೆಗಳ ಲಭ್ಯತೆಗೆ ಸಂಬಂಧಿಸಿದಂತೆ ಸಾರ್ವಜನಿಕರಿಗೆ ನೆರವಾಗಲು ಪ್ರಾರಂಭಿಸಲಾಗಿದ್ದ ಟೋಲ್‌ಫ್ರೀ ಸಂಖ್ಯೆ 104 ಆರೋಗ್ಯ ಮಾಹಿತಿ ಸಹಾಯವಾಣಿಯಂತಹ ಕೆಲವು ಕಾರ್ಯಕ್ರಮಗಳಿಂದ ಉತ್ತಮ ಫಲಿತಾಂಶ ಲಭಿಸಿವೆ. ದಿನದ 24 ಗಂಟೆಗಳ ಕಾಲವೂ ನಿರಂತರವಾಗಿ ಕಾರ್ಯ ನಿರ್ವಹಿಸುವ ನಾಗರಿಕರ ನೆರವು ತಾಣವು ಸೂಕ್ತ ಮತ್ತು ಸಕಾಲಿಕ ಆರೋಗ್ಯವನ್ನು ಪಡೆಯುವಲ್ಲಿ ರೋಗಿಗಳಿಗೆ ಮಾರ್ಗದರ್ಶನ ಮತ್ತು ನೆರವು ನೀಡಲು ಜಿಲ್ಲಾ ಆಸ್ಪತ್ರೆಗಳಲ್ಲಿ ಹಾಗೂ ಪ್ರಮುಖ ಆಸ್ಪತ್ರೆಗಳಲ್ಲಿ ಅನುಷ್ಠಾನಗೊಳಿಸಲಾದ ಮತ್ತೊಂದು ನವೀನ ಯೋಜನೆಯಾಗಿದೆ. ಇದರಿಂದಾಗಿ, ರೋಗಿಗಳ ಕಾಯುವ ಸಮಯವು ಗಣನೀಯವಾಗಿ ಕಡಿಮೆಯಾಗಿದೆ ಮತ್ತು ರೋಗಿಗಳ ಸಂಕಷ್ಟಗಳು ಕಡಿಮೆಯಾಗಿವೆ. ಕರ್ನಾಟಕ ಸರ್ಕಾರವು ರಾಜ್ಯದಲ್ಲಿನ ಪ್ರತಿಯೊಂದು ಜಿಲ್ಲೆಯಲ್ಲಿಯೂ ಒಂದು ವೈದ್ಯಕೀಯ ಕಾಲೇಜನ್ನು ಸ್ಥಾಪಿಸಲು ಉದ್ದೇಶಿಸಿದೆ. ಕರ್ನಾಟಕದಲ್ಲಿನ ವಿದ್ಯಾರ್ಥಿಗಳಿಗೆ ಆದ್ಯತೆಯನ್ನು ನೀಡುವ ಸಲುವಾಗಿ, ಸ್ನಾತಕೋತ್ತರ ಪದವಿ ಪ್ರವೇಶ ಪರೀಕ್ಷೆ ನಿಯಮಗಳು, 2006 ಕ್ಕೆ ತಿದ್ದುಪಡಿ ಮಾಡಲಾಗಿದೆ.

22. ರಾಜ್ಯದಲ್ಲಿ ನನ್ನ ಸರ್ಕಾರವು ಅಸ್ತಿತ್ವಕ್ಕೆ ಬಂದ ನಂತರ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ಗ್ರಾಮೀಣ ಕರ್ನಾಟಕದ ಜೀವನ ಮಟ್ಟ ಸುಧಾರಿಸುವ ಮುನ್ನೋಟದೊಂದಿಗೆ ಹಲವಾರು ಕಾರ್ಯಕ್ರಮಗಳನ್ನು ಕೈಗೊಂಡಿದೆ. ಕಾಮಗಾರಿಗಳ ಭೌತಿಕ ಮತ್ತು ಹಣಕಾಸಿನ ಪ್ರಗತಿಯ ನಡುವೆ ಯಾವುದೇ ಅಂತರವಿಲ್ಲದಂಥ ಪಾರದರ್ಶಕ, ಸೋರಿಕೆ ರಹಿತ ಆಡಳಿತ ವ್ಯವಸ್ಥೆ ತರಲು ಗಾಂಧಿ ಕಾಯಕ ತಂತ್ರಾಂಶದ ಮೂಲಕವೇ ಕಾಮಗಾರಿಗಳ ಎಲ್ಲ ಬಿಲ್‌ಗಳ ಪಾವತಿಯನ್ನು ನಿರ್ವಹಿಸುವ ನಿರ್ಣಯ ಕೈಗೊಂಡಿದೆ.

23. ಹಳ್ಳಿಗಳಲ್ಲಿ ನೈರ್ಮಲ್ಯತೆಯನ್ನು ಕಾಪಾಡುವ ಸಂಬಂಧದಲ್ಲಿ ಶಾಸನಾತ್ಮಕ ಹಕ್ಕನ್ನು ನೀಡಲು ಕರ್ನಾಟಕ ನೈರ್ಮಲ್ಯ ಸೌಲಭ್ಯಗಳ ಖಾತರಿ ವಿಧೇಯಕ–2014ನ್ನು ಮಂಡಿಸಲು ನಿರ್ಣಯಿಸಲಾಗಿದೆ.

24. ಗ್ರಾಮೀಣ ಬದುಕು, ಇತಿಹಾಸ, ಸಂಸ್ಕೃತಿ, ನೈಸರ್ಗಿಕ ಸಂಪನ್ಮೂಗಳು ಮತ್ತು ಅಭಿವೃದ್ಧಿ ಚಟುವಟಿಕೆಗಳನ್ನು ಬಿಂಬಿಸಲು ಕರ್ನಾಟಕ ಜಾನಪದ ವಿಶ್ವವಿದ್ಯಾಲಯದ ಸಹಯೋಗದಲ್ಲಿ "ಗ್ರಾಮಚರಿತ್ರೆ ಕೋಶ"ವನ್ನು ರಚಿಸಲು ಯೋಜಿಸಲಾಗಿದೆ. ಉತ್ತಮವಾದ ರಸ್ತೆ, ಚರಂಡಿ, ಮೈದಾನ, ಉದ್ಯಾನವನ ಇತ್ಯಾದಿಗಳನ್ನು ಒದಗಿಸಲು ಒಂದು ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆಯನ್ನು ಕೈಗೊಳ್ಳಲಾಗುವುದು.

25. ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಉದ್ಯೋಗವನ್ನು ಅರಸಿ ಬರುವ ಗ್ರಾಮೀಣ ಜನರಿಗೆ ನೆರವು ನೀಡುವುದಕ್ಕಾಗಿ ಶುಲ್ಕ ರಹಿತ ಸಹಾಯವಾಣಿ (ಹೆಲ್ಪ್ ಲೈನ್) ಪ್ರಾರಂಭಿಸಲಾಗಿದೆ. ಈ ಯೋಜನೆಯ ಅಡಿಯಲ್ಲಿ ನಿಯೋಜಿತರಾದ ವ್ಯಕ್ತಿಗಳ ಖಾತೆಗಳಿಗೆ ₹ 1,340 ಕೋಟಿ ಮೊಬಲಗನ್ನು ಈಗಾಗಲೇ ನೇರವಾಗಿ ವಿದ್ಯುನ್ಮಾನ ವಿಧಾನದ ಮೂಲಕ ವರ್ಗಾವಣೆ ಮಾಡಲಾಗಿದೆ.

26. ಗ್ರಾಮ ಪಂಚಾಯಿತಿಗಳ ಸಂಪನ್ಮೂಲಗಳನ್ನು ಅವುಗಳ ಶಾಸನಬದ್ಧ ಅನುದಾನಗಳನ್ನು ಹೆಚ್ಚಿಸುವ ಮೂಲಕ ಗಣನೀಯವಾಗಿ ವೃದ್ಧಿಸಲಾಗಿದೆ. ಉತ್ತಮ ಹಣಕಾಸು ನಿರ್ವಹಣೆಯನ್ನು ಸಾಧಿಸುವ ನಿಟ್ಟಿನಲ್ಲಿ ಗ್ರಾಮ ಪಂಚಾಯಿತಿಗಳಿಗೆ ಉತ್ತೇಜನ ನೀಡಲು "ಗಾಂಧಿ ಗ್ರಾಮ ಪುರಸ್ಕಾರ" ಯೋಜನೆಯಡಿ ಒಂದು ನೂತನ ಪ್ರಶಸ್ತಿಯನ್ನು ಪ್ರಾರಂಭಿಸಲಾಗಿದೆ. ನೌಕರರಲ್ಲಿ ಹೆಚ್ಚಿನ ಶಿಸ್ತು ಮತ್ತು ಕಾರ್ಯನಿರ್ವಹಣಾ ಮನೋಭಾವವನ್ನು ತರುವ ನಿಟ್ಟಿನಲ್ಲಿ ಎಲ್ಲಾ ಕಚೇರಿಗಳಲ್ಲಿ ಬಯೋಮೆಟ್ರಿಕ್ಸ್ ಅನ್ನು ಪ್ರಾರಂಭಿಸಲಾಗಿದೆ.

27. ವಿಶೇಷವಾಗಿ ಆರ್ಥಿಕವಾಗಿ ಹಿಂದುಳಿದ ವರ್ಗ/ಕಡಿಮೆ ಆದಾಯದ ಗುಂಪಿನ ಪ್ರವರ್ಗಗಳಿಗೆ ಕೈಗೆಟಕುವ ಬೆಲೆಯಲ್ಲಿ ಮನೆಗಳು ದೊರೆಯುವಂತೆ ಮಾಡುವ ಸಲುವಾಗಿ, ನನ್ನ ಸರ್ಕಾರವು "ಕೈಗೆಟುಕುವ ವಸರಿ ನೀತಿ"ಯನ್ನು ರೂಪಿಸಿದೆ. ಪ್ರೋತ್ಸಾಹಕಗಳು ಮತ್ತು ರಿಯಾಯಿತಿಗಳ ಮುಖಾಂತರ ಡೆವಲಪರ್‌ಗಳೊಂದಿಗೆ ವಿವಿಧ ಬಗೆಯ ಸಾರ್ವಜನಿಕ ಖಾಸಗಿ ಸಹಭಾಗಿತ್ವಗಳನ್ನು ಪ್ರೋತ್ಸಾಹಿಸಲು ರಾಷ್ಟ್ರೀಯ ನಗರ ವಸತಿ ಹಾಗೂ ವಸತಿ ನೀತಿ (ಎನ್‌ಯುಹೆಚ್‌ಹೆಚ್‌ಪಿ) 2007 ಇದರಲ್ಲಿ ಉದ್ದೇಶಿಸಲಾದ ಕಾರ್ಯತಂತ್ರವನ್ನು ಕಾರ್ಯರೂಪಕ್ಕೆ ತರಲು ಈ ನೀತಿಯು ನೆರವಾಗುತ್ತದೆ.

28. ನಮ್ಮ ವಿದ್ಯಾರ್ಥಿಗಳು ಅಂತರ್ಜಾಲದ ಮುಖಾಂತರ ಜ್ಞಾನವನ್ನು ವಿಸ್ತರಿಸಿಕೊಳ್ಳಲು ಅನುಕೂಲ ಕಲ್ಪಿಸುವ ಸಲುವಾಗಿ, ನನ್ನ ಸರ್ಕಾರವು ಪದವಿಪೂರ್ವ ಶಿಕ್ಷಣ ಪಡೆಯುತ್ತಿರುವ ವಿದ್ಯಾರ್ಥಿಗಳಿಗೆ ಉಚಿತ ಲ್ಯಾಪಟಾಪ್‌ಗಳು ಮತ್ತು ವಿದ್ಯುನ್ಮಾನ ನೋಟ್‌ಪ್ಯಾಡ್‌ಗಳನ್ನು ಒದಗಿಸಲು ನಿರ್ಧರಿಸಿದೆ. ಶಾಲೆಗಳಲ್ಲಿನ ಖಾಲಿ ಹುದ್ದೆಗಳ ಸಮಸ್ಯೆಯನ್ನು ಪರಿಹರಿಸಲು ಶಿಕ್ಷಕರನ್ನು ನೇಮಕ ಮಾಡುವ ಪ್ರಕ್ರಿಯೆಗೆ ಅನುಮೋದನೆ ನೀಡುವ ಮುಖೇನ ಮೊದಲು ಆದ್ಯತೆಯನ್ನು ನೀಡಲಾಗಿದೆ. ನನ್ನ ಸರ್ಕಾರವು, 24 ಜಿಲ್ಲೆಗಳಲ್ಲಿ,

ಅದರಲ್ಲೂ ವಿಶೇಷವಾಗಿ ಶೈಕ್ಷಣಿಕವಾಗಿ ಹಿಂದುಳಿದ ಪ್ರದೇಶಗಳಲ್ಲಿ ಪ್ರತ್ಯೇಕ ಮಹಿಳಾ ಕಾಲೇಜುಗಳನ್ನು ಸ್ಥಾಪಿಸಲು ದೃಢವಾದ ಕ್ರಮಗಳನ್ನು ಕೈಗೊಂಡಿದೆ. ರಾಷ್ಟ್ರೀಯ ಉಚ್ಚತರ ಶಿಕ್ಷಣ ಅಭಿಯಾನ (ಆರ್.ಯು.ಎಸ್.ಎ) ಅಡಿಯಲ್ಲಿ ಲಭ್ಯವಿರುವ ನಿಧಿಗಳನ್ನು ಬಳಸಿಕೊಳ್ಳಲು ವಿಶೇಷ ಘಟಕವನ್ನು ಸ್ಥಾಪಿಸಲು ಕ್ರಮ ತೆಗೆದುಕೊಳ್ಳಲಾಗಿದೆ. ಉನ್ನತ ಶಿಕ್ಷಣದ ಗುಣಮಟ್ಟವನ್ನು ಸುಧಾರಿಸುವ ಸಲುವಾಗಿ ಧಾರವಾಡದಲ್ಲಿ ಉನ್ನತ ಶಿಕ್ಷಣ ಅಕಾಡೆಮಿಯನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ. ನಮ್ಮ ಕಾಲೇಜುಗಳು ಮತ್ತು ವಿಶ್ವವಿದ್ಯಾಲಯಗಳ ವಿದ್ಯಾರ್ಥಿಗಳಿಗಾಗಿ ವಿಶೇಷ ಉದ್ಯಮಶೀಲತಾ ತರಬೇತಿ ಕಾರ್ಯಕ್ರಮವನ್ನು ಪ್ರಾರಂಭಿಸಲಾಗಿದೆ. ಜೊತೆಗೆ, ಪರಿಣಿತ ಸಂಪನ್ಮೂಲ ವ್ಯಕ್ತಿಗಳನ್ನು ಬಳಸಿಕೊಂಡು ಎಲ್ಲಾ ಪ್ರಥಮ ದರ್ಜೆ ಕಾಲೇಜುಗಳು ಮತ್ತು ಪಾಲಿಟೆಕ್ನಿಕ್‌ಗಳಿಗೆ ಉಪಗ್ರಹ ಆಧಾರಿತ ಶಿಕ್ಷಣವನ್ನು ವಿಸ್ತರಿಸಲಾಗುತ್ತಿದೆ.

29. ಹೊಸ ಕೈಗಾರಿಕಾ ನೀತಿಯನ್ನು ರೂಪಿಸಿ, ಅದನ್ನು 1.4.2014ರಿಂದ ಜಾರಿಗೆ ತರಲಾಗುವುದು. ಈ ನೀತಿಯು ಮುಂದಿನ ಐದು ವರ್ಷಗಳಲ್ಲಿ 10 ಲಕ್ಷ ನೇರ ಉದ್ಯೋಗಗಳನ್ನು ಸೃಷ್ಟಿಸುವ ಗುರಿ ಇಟ್ಟುಕೊಂಡು, ಉತ್ಪಾದನಾ ವಲಯವನ್ನು ಮೇಲ್ದರ್ಜೆಗೇರಿಸುವ ಮುಖಾಂತರ ರಾಜ್ಯದ ಕೈಗಾರಿಕೀಕರಣವನ್ನು ಸಮತೋಲಿತವಾಗಿರುವಂತೆ ಹಾಗೂ ಸಮಗ್ರವಾಗಿರುವಂತೆ ನೋಡಿಕೊಳ್ಳುತ್ತದೆ. ಹೆಚ್ಚು ಉದ್ಯೋಗವನ್ನು ಸೃಷ್ಟಿಸುವ ಸಲುವಾಗಿ ಮತ್ತು ಬಂಡವಾಳ ಹೂಡಿಕೆದಾರರಿಗೆ ಆದ್ಯತಾ ತಾಣವಾಗಿ ರಾಜ್ಯವನ್ನು ರೂಪಿಸುವ ಸಲುವಾಗಿ, 2014ರ ಅಕ್ಟೋಬರ್ ತಿಂಗಳಿನಲ್ಲಿ ಜಾಗತಿಕ ಹೂಡಿಕೆದಾರರ ಸಮಾವೇಶವನ್ನು ಆಯೋಜಿಸುವ ಯೋಜನೆಯನ್ನು ಹಾಕಿಕೊಳ್ಳಲಾಗಿದೆ. ಹೂಡಿಕೆದಾರರಿಗೆ ಅನುಕೂಲ ಕಲ್ಪಿಸುವ ಸಲುವಾಗಿ, ವಿವಿಧ ಹಿತಾಸಕ್ತಿದಾರರಿಂದ ಆನ್‌ಲೈನ್‌ಲ್ಲಿಯೇ ಅರ್ಜಿಗಳನ್ನು ಸಲ್ಲಿಸಲು ಮತ್ತು ಎಲ್ಲಾ ಅನುಮೋದನೆಗಳು/

ಲೈಸೆನ್ಸುಗಳನ್ನು ಆನ್‌ಲೈನ್‌ನಲ್ಲಿಯೇ ಪಡೆಯಲು ಅನುಕೂಲ ಕಲ್ಪಿಸಲಾಗುವುದು.

30. ನನ್ನ ಸರ್ಕಾರವು, ಹೆಚ್ಚು ಉದ್ಯೋಗ ಸಾಮರ್ಥ್ಯ ಹೊಂದಿರುವ ಮಾಹಿತಿ ತಂತ್ರಜ್ಞಾನ ವಲಯದ ಕೌಶಲ್ಯಗಳನ್ನು ಬಳಕೆ ಮಾಡಿಕೊಳ್ಳುವ ದೃಷ್ಟಿಯಿಂದ, ವಿಶೇಷವಾಗಿ 2ನೇ ದರ್ಜೆ ಹಾಗೂ 3ನೇ ದರ್ಜೆಯ ನಗರಗಳಲ್ಲಿ ಬಂಡವಾಳ ಹೂಡಿಕೆಗಳನ್ನು ಆಕರ್ಷಿಸುವ ಮತ್ತು ಕೌಶಲ್ಯಾಭಿವೃದ್ಧಿ ಹಾಗೂ ಉದ್ಯಮಶೀಲತೆಗೆ ಪ್ರೋತ್ಸಾಹಿಸುವ ನೀತಿಯೊಂದನ್ನು ರೂಪಿಸಿದೆ. ಈ ನಗರಗಳಲ್ಲಿ ಯುವಜನರು, ವಿಚಾರಧಾರೆಗಳು, ಹಣಕಾಸು ವ್ಯವಸ್ಥೆ ಮತ್ತು ರೂವಾರಿಗಳನ್ನು ಒಗ್ಗೂಡಿಸಿ ಹೊಸ ಶಕೆಯ ವ್ಯವಸ್ಥೆಯೊಂದನ್ನು ರೂಪಿಸುವಲ್ಲಿ (ನ್ಯೂ ಏಜ್ ಇನ್‌ಕ್ಯೂಬೇಟರ್ಸ್) ಕರ್ನಾಟಕವು ಭಾರತದಲ್ಲಿಯೇ ಮೊಟ್ಟಮೊದಲ ರಾಜ್ಯವಾಗಲಿದೆ.

31. ಇ–ಆಡಳಿತ ಕ್ಷೇತ್ರದಲ್ಲಿ, ಸರ್ಕಾರವು, ನಾಗರಿಕರಿಗೆ ಆಡಳಿತವು ತಲುಪುವಂತಾಗಲು ಮತ್ತು ನಾಗರಿಕ ಸೇವೆಗಳನ್ನು ಒದಗಿಸಲು ಎಲ್ಲಾ ಗ್ರಾಮ ಪಂಚಾಯಿತಿಗಳಲ್ಲಿ ಸಾಮಾನ್ಯ ಸೇವಾ ಕೇಂದ್ರಗಳನ್ನು (ಸಿಎಸ್‌ಸಿ) ಸ್ಥಾಪಿಸಲಿದೆ ಮತ್ತು ಇ–ಜಿಲ್ಲಾ ಕಾರ್ಯಕ್ರಮಗಳನ್ನು ರೂಪಿಸಲಿದೆ. ರಾಜ್ಯವು ತನ್ನ ನಾಗರಿಕರಿಗೆ ಸೆಲ್ ಫೋನ್‌ಗಳಲ್ಲಿ 250ಕ್ಕೂ ಹೆಚ್ಚು ಸೇವೆಗಳನ್ನು ಒದಗಿಸಲು ಮೊಬೈಲ್ ಸೇವೆಗಳನ್ನು ಆರಂಭಿಸುವ ವ್ಯವಸ್ಥೆಯನ್ನು ರೂಪಿಸಲು ಸಜ್ಜಾಗಿದೆ. ಇದನ್ನು ಎಲ್ಲ ನಾಗರಿಕರಿಗೂ ಹಂತಹಂತವಾಗಿ ವಿಸ್ತರಿಸಲಾಗುವುದು. ಪ್ರಸಕ್ತ ಇ–ಖರೀದಿ ಕಾರ್ಯಕ್ರಮದ ಅಡಿಯಲ್ಲಿ ಪ್ರತಿ ವರ್ಷವೂ 50,000 ಕೋಟಿ ರೂ.ಗಳಿಗೂ ಹೆಚ್ಚು ಮೌಲ್ಯದ ಖರೀದಿ ವ್ಯವಹಾರವನ್ನು ನಡೆಸಲಾಗಿದ್ದು, ಇದು ಭಾರತದಲ್ಲಿಯೇ ಅತ್ಯಧಿಕವಾದದ್ದೆಂದು ತಿಳಿಸಲು ನನಗೆ ಸಂತೋಷವೆನಿಸುತ್ತಿದೆ.

32. ನನ್ನ ಸರ್ಕಾರವು, ರಾಜ್ಯದಲ್ಲಿ ಪ್ರವಾಸೋದ್ಯಮಕ್ಕೆ ಪುನಶ್ಚೇತನ ನೀಡಲು ಒಂದು "ವಿಜನ್ ಗ್ರೂಪ್"ನ್ನು ರಚಿಸಿದೆ. ಮೂಲಭೂತ ಸೌಕರ್ಯದ ಸೃಜನೆಯಲ್ಲಿ ಖಾಸಗಿ ವಲಯದ ಸಹಭಾಗಿತ್ವಕ್ಕೆ ಸಾಕಷ್ಟು ಅವಕಾಶವನ್ನು ನೀಡಲಾಗಿದೆ. ನನ್ನ ಸರ್ಕಾರವು, ಖಾಸಗಿ ವಲಯಗಳು ತಮ್ಮ ಸಾಮಾಜಿಕ ಜವಾಬ್ದಾರಿಯ ಭಾಗವಾಗಿ ಪರಿಸರ ಸಂರಕ್ಷಣೆ ಮತ್ತು ಮೂಲಭೂತ ಸೌಲಭ್ಯಗಳನ್ನು ಕಲ್ಪಿಸುವ "ಒಂದು ಪ್ರವಾಸೀತಾಣ ಕಾರ್ಯಕ್ರಮ"ವನ್ನು ಅಳವಡಿಸಿಕೊಳ್ಳುವಂತೆ ಉತ್ತೇಜನ ನೀಡುತ್ತದೆ. ರಾಜ್ಯದಲ್ಲಿರುವ ಕರಾವಳಿ ಪ್ರವಾಸೋದ್ಯಮವನ್ನು ಉತ್ತೇಜಿಸಲು ನನ್ನ ಸರ್ಕಾರವು ಕರಾವಳಿ ನಿಯಂತ್ರಣ ವಲಯದ ನಿಯಮಾವಳಿಯನ್ನು ಸಡಿಲಿಸಲು ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಿದೆ. ಒಂದು ಮಹಾ ಕರಾವಳಿ ವೃತ್ತ ಅಭಿವೃದ್ಧಿ ಯೋಜನೆಯನ್ನು ಭಾರತ ಸರ್ಕಾರದ ನೆರವಿನೊಂದಿಗೆ ಕೈಗೆತ್ತಿಕೊಳ್ಳಲಾಗುತ್ತಿದೆ.

33. ನಮ್ಮ ಖನಿಜ ಸಂಪನ್ಮೂಲದಲ್ಲಿ ಅಕ್ರಮ ಗಣಿಗಾರಿಕೆ ಮತ್ತು ಅಕ್ರಮ ಸಾಗಣೆಯನ್ನು ನಿಯಂತ್ರಿಸಲು ಕಟ್ಟುನಿಟ್ಟಾದ ಕ್ರಮಗಳನ್ನು ಜಾರಿಗೊಳಿಸಲಾಗಿದೆ ಹಾಗೂ ಕಲ್ಲು ಪುಡಿ ಮಾಡುವ ಘಟಕಗಳು ಮತ್ತು ಕಲ್ಲು ಗಣಿಗಾರಿಕೆ ಸಂಬಂಧ ಒಂದು ಹೊಸ ಶಾಸನವನ್ನು ಜಾರಿಗೆ ತರಲಾಗಿದೆ. ಅಕ್ರಮ ಕಬ್ಬಿಣ ಅದಿರು ಗಣಿಗಾರಿಕೆ ಸಂಬಂಧ ಮಾನ್ಯ ಲೋಕಾಯುಕ್ತ ವರದಿಯಂತೆ ತಪ್ಪಿತಸ್ಥರನ್ನು ಶಿಕ್ಷಿಸಲು ಪ್ರಾಮಾಣಿಕ ಕ್ರಮ ಜರುಗಿಸಲಾಗಿದೆ. ಮಾನ್ಯ ಸರ್ವೋಚ್ಚ ನ್ಯಾಯಲಯದ ಆದೇಶಗಳ ಅನುಸಾರ, ಗಣಿಗಾರಿಕೆಯಿಂದ ಬಾಧಿತವಾದ ಜಿಲ್ಲೆಗಳಾದ ಬಳ್ಳಾರಿ, ಚಿತ್ರದುರ್ಗ ಮತ್ತು ತುಮಕೂರು ಜಿಲ್ಲೆಗಳಿಗಾಗಿ ಸೂಕ್ತ ಪುನರ್ ಸುಧಾರಣಾ ಹಾಗೂ ಪುನರ್ ವ್ಯವಸ್ಥೆ ಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸಲು ರಾಜ್ಯ ಸರ್ಕಾರವು ಬದ್ಧವಾಗಿದೆ. ಪುನರ್ ಸುಧಾರಣಾ ಹಾಗೂ ಪುನರ್‌ವ್ಯವಸ್ಥೆ (ಆರ್ ಮತ್ತು ಆರ್) ಯೋಜನೆಗಳನ್ನು ರೂಪಿಸುವ ಕಾರ್ಯವನ್ನು

ಭಾರತೀಯ ಅರಣ್ಯ ಸಂಶೋಧನೆ ಮತ್ತು ಶಿಕ್ಷಣ ಪರಿಷತ್ತಿಗೆ (ಐಸಿಎಫ್‌ಆರ್‌ಇ) ವಹಿಸಲಾಗಿದೆ.

34. ನನ್ನ ಸರ್ಕಾರವು ಅರಣ್ಯಗಳು ಮತ್ತು ಪ್ರಾಕೃತಿಕ ಸಂಪನ್ಮೂಲಗಳನ್ನು ಸಂರಕ್ಷಿಸಲು ಬದ್ಧವಾಗಿದೆ. ಮಾನವ–ಪ್ರಾಣಿ ಸಂಘರ್ಷದ ಪ್ರಕರಣಗಳನ್ನು ಕಡಿಮೆಗೊಳಿಸಲು ಮತ್ತು ಜೀವಕ್ಕೆ ಮತ್ತು ಆಸ್ತಿಪಾಸ್ತಿಗಳಿಗೆ ಆಗಿರುವ ನಷ್ಟಕ್ಕಾಗಿ ರೈತರಿಗೆ ಸೂಕ್ತ ನಷ್ಟಪರಿಹಾರ ನೀಡಲು ನಾವು ಗಂಭೀರ ಪ್ರಯತ್ನಗಳನ್ನು ಮಾಡುತ್ತೇವೆ. ನನ್ನ ಸರ್ಕಾರವು ಖಾಸಗಿ ಭೂಮಿಯಲ್ಲಿ ಅರಣ್ಯ ಬೆಳೆಸಲು ಪ್ರೋತ್ಸಾಹಿಸುವಂಥ ಯೋಜನೆಗಳನ್ನು ಬದ್ಧತೆಯಿಂದ ಮುಂದುವರೆಸುವುದು. ನನ್ನ ಸರ್ಕಾರವು ಕೇಂದ್ರ ಅಧಿನಿಯಮವನ್ನು ಜಾರಿಗೊಳಿಸಿ, ಪರಿಶಿಷ್ಟ ಜಾತಿಯವರು, ಪರಿಶಿಷ್ಟ ಪಂಗಡದವರು, ಲಂಬಾಣಿಗಳು ಮತ್ತು ಇತರ ಪಾರಂಪರಿಕ ಅರಣ್ಯ ವಾಸಿಗಳ ಹಕ್ಕುಗಳನ್ನು ರಕ್ಷಿಸಲು ಬದ್ಧವಾಗಿದೆ.

35. ಪ್ರಮುಖ ನಗರಗಳಲ್ಲಿ ಸಾರಿಗೆ ವಲಯವನ್ನು ಸುಧಾರಿಸಲು ಹಲವಾರು ಮೂಲ ಸೌಕರ್ಯ ಅಭಿವೃದ್ಧಿ ಯೋಜನೆಗಳನ್ನು ಕೈಗೊಳ್ಳಲಾಗುತ್ತಿದೆ. ಅಲ್ಲದೆ, ರಾಜ್ಯದಾದ್ಯಂತ ಇರುವ ಸಾರ್ವಜನಿಕ ಬೇಡಿಕೆಯನ್ನು ಪೂರೈಸಲು ಹೊಸ ಇಂಧನ–ಮಿತವ್ಯಯ ವಾಹನಗಳನ್ನು ಪರಿಚಯಿಸಲಾಗುತ್ತಿದೆ.

36. ಹೆಚ್ಚುವರಿ 3880 ಮೆ. ವ್ಯಾಟ್ ವಿದ್ಯುತ್ ಉತ್ಪಾದನೆಯನ್ನು ಮಾಡುವ ಮೂಲಕ ಮುಂಬರುವ ವರ್ಷಗಳಲ್ಲಿ ವಿದ್ಯುತ್ ದಕ್ಷತೆಯನ್ನು ಸಾಧಿಸಲು ಉದ್ದೇಶಿಸಲಾಗಿದೆ. ವಿದ್ಯುತ್ ವಿತರಣೆಯಲ್ಲಿ ಆಗುವ ಒಟ್ಟಾರೆ ತಾಂತ್ರಿಕ ಮತ್ತು ವಾಣಿಜ್ಯಕ ನಷ್ಟವನ್ನು ಕಡಿಮೆ ಮಾಡಿ ನವೀಕರಿಸಬಹುದಾದ ಇಂಧನ ಮೂಲಗಳ ಬಳಕೆಗೆ ವಿಶೇಷ ಒತ್ತು ನೀಡಲಾಗುವುದು.

37. ರಾಜ್ಯವು ರೈಲು, ವಿಮಾನ, ನೌಕಾಯಾನ ವಲಯಗಳು ಸೇರಿದಂತೆ ರಾಜ್ಯದ ಸಂಪರ್ಕ ವ್ಯವಸ್ಥೆಯನ್ನು ಸುಧಾರಿಸುವ ಉದ್ದೇಶವನ್ನು ಹೊಂದಿದೆ. ಪ್ರಗತಿಯಲ್ಲಿರುವ ರೈಲ್ವೆ ಯೋಜನೆಗಳನ್ನು ಆದ್ಯತೆ ನೀಡಿ ಪೂರ್ಣಗೊಳಿಸಲಾಗುತ್ತಿದೆ. ಕರ್ನಾಟಕ ಸರ್ಕಾರವು ಕೋಲಾರ ಮತ್ತು ಯಾದಗಿರಿಯಲ್ಲಿ ರೈಲ್ವೆ ಕೋಚ್ ಕಾರ್ಖಾನೆಯನ್ನು ಸ್ಥಾಪಿಸಲು ರೈಲ್ವೆ ಮಂತ್ರಾಲಯಕ್ಕೆ ತನ್ನ ಒಪ್ಪಿಗೆಯನ್ನು ಸಹ ನೀಡಿದೆ. ಹುಬ್ಬಳ್ಳಿ-ಅಂಕೋಲಾ ರೈಲ್ವೆ ಮಾರ್ಗ ಮತ್ತು ತದಡಿ ಬಂದರನ್ನು ಭಾರತ ಸರ್ಕಾರದ ಸಹಯೋಗದಲ್ಲಿ ಮುಂದುವರೆಸಲಾಗುತ್ತದೆ.

38. ಪರಿಶುದ್ಧ ಇಂಧನಕ್ಕಾಗಿ ನಗರ ಅನಿಲ ವಿತರಣೆ (CGD), ಬೆಂಗಳೂರು ಅಂತರಾಷ್ಟ್ರೀಯ ಸಮಾವೇಶ ಕೇಂದ್ರ (BIC) ಮತ್ತು ದೇವನಹಳ್ಳಿ ಬಿಸಿನೆಸ್ ಪಾರ್ಕ (DBP) ನಂತಹ ವಿಶಿಷ್ಟ ಯೋಜನೆಗಳನ್ನು ಕೈಗೆತ್ತಿಕೊಳ್ಳುವ ಮೂಲಕ ಸೌಲಭ್ಯ ವಲಯವನ್ನು ಸದೃಢಗೊಳಿಸಲಾಗುವುದು. ರಾಜ್ಯದಲ್ಲಿ ಪ್ರಾದೇಶಿಕ ವಿಮಾನಯಾನ ಸಂಪರ್ಕವನ್ನು ಉತ್ತಮಗೊಳಿಸುವುದಕ್ಕಾಗಿ ಕಿರು ವಿಮಾನ ನಿಲ್ದಾಣ ನೀತಿಯನ್ನು ಸಿದ್ಧಪಡಿಸಲಾಗುತ್ತಿದೆ.

39. ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ಮಟ್ಟದಲ್ಲಿ ಬೆಂಗಳೂರು ಅತಿ ದೊಡ್ಡ ಸ್ಥಾನಮಾನವನ್ನು ಪಡೆದಿರುವ ಒಂದು ಮಹಾನಗರ. ನನ್ನ ಸರ್ಕಾರದ ವತಿಯಿಂದ ಈ ಭಾಗದಲ್ಲಿರುವ ಸುಮಾರು ಹತ್ತು ದಶಲಕ್ಷ ನಾಗರಿಕರಿಗೆ ಹೆಚ್ಚಿನ ಮೂಲಭೂತ ಸೌಕರ್ಯ ಹಾಗೂ ಸೇವೆಗಳನ್ನು ಒದಗಿಸಲು ಬದ್ಧವಾಗಿದೆ. ಈ ನಿಟ್ಟಿನಲ್ಲಿ ಸುಗಮಸಂಚಾರ ವ್ಯವಸ್ಥೆ, ಘನ ತ್ಯಾಜ್ಯ ವಿಲೇವಾರಿ ಹಾಗೂ ವಸತಿ ಸೌಕರ್ಯ ಮುಂತಾದ ಹಲವಾರು ವಿನೂತನ ಯೋಜನೆಗಳನ್ನು ಕೈಗೊಳ್ಳಲಾಗಿದೆ. ನಮ್ಮ ಜನಗಳ ಬಹುದಿನದ ಆಶೋತ್ತರದಂತೆ ಇತ್ತೀಚೆಗೆ ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ನಾಡಪ್ರಭು ಶ್ರೀ ಕೆಂಪೇಗೌಡರ ಹೆಸರನ್ನು ಇಡಲಾಗಿದೆ.

40. ಬೆಂಗಳೂರು ಮೆಟ್ರೋ ರೈಲು ಯೋಜನೆಯನ್ನು ಸಮರ್ಥವಾಗಿ ಮುಂದುವರೆಸಿಕೊಂಡು ಹೋಗಲಾಗುತ್ತಿದೆ. ಪೀಣ್ಯ ಗ್ರಾಮ ನಿಲ್ದಾಣ ಮತ್ತು ನಾಗಸಂದ್ರ ನಡುವಿನ ವಿಭಾಗವು 2014ರ ಆಗಸ್ಟ ತಿಂಗಳಿನಲ್ಲಿ ಸಾರ್ವಜನಿಕರ ಬಳಕೆಗೆ ಕಾರ್ಯಾರಂಭ ಮಾಡುವುದೆಂದು ನಿರೀಕ್ಷಿಸಲಾಗಿದೆ. ಬೈಯಪ್ಪನಹಳ್ಳಿ ಮತ್ತು ಮೈಸೂರು ರಸ್ತೆ ಟರ್ಮಿನಲ್ ನಡುವಿನ ಇಡೀ ಪೂರ್ವ–ಪಶ್ಚಿಮ ಕಾರಿಡಾರನ್ನು 2014ರ ಕೊನೆಯ ವೇಳೆಗೆ ಸಾರ್ವಜನಿಕರಿಗಾಗಿ ಮುಕ್ತಗೊಳಿಸಲಾಗುವುದೆಂದು ನಿರೀಕ್ಷಿಸಲಾಗಿದೆ.

41. ಡಿಸೆಂಬರ್ 2013ರ ಅಂತ್ಯದವರೆಗಿನ ಪ್ರಸಕ್ತ ಹಣಕಾಸು ವರ್ಷದಲ್ಲಿ, ವಾಣಿಜ್ಯ ಮತ್ತು ಅಬಕಾರಿ ತೆರೆಗೆಯು 35000 ಕೋಟಿ ರೂಪಾಯಿಗಳಿಗಿಂತ ಹೆಚ್ಚಿನ ರಾಜಸ್ವವನ್ನು ಸಂಗ್ರಹಿಸಲಾಗಿದೆ ಮತ್ತು ಇದು ಹಿಂದಿನ ವರ್ಷಕ್ಕೆ ಹೋಲಿಸಿದರೆ ಸುಮಾರು ಶೇ.12ರಷ್ಟು ಹೆಚ್ಚುವರಿ ಬೆಳವಣಿಗೆಯನ್ನು ತೋರಿಸುತ್ತಿದೆ. ಸರ್ಕಾರವು ಕೈಗೊಳ್ಳುತ್ತಿರುವ ಅಭಿವೃದ್ಧಿ ಕಾರ್ಯಕ್ರಮಗಳನ್ನು ಅರ್ಥಪೂರ್ಣವಾಗಿ ಅನುಷ್ಠಾನಗೊಳಿಸಲು ಸಾಧ್ಯವಾಗುವ ಹಾಗೆ ರಾಜಸ್ವ ಸಂಗ್ರಹಣೆಯ ಗುರಿಗಳನ್ನು ಸಾಧಿಸಲು ಸರ್ವ ಪ್ರಯತ್ನಗಳನ್ನೂ ಮಾಡಲಾಗುತ್ತಿದೆ.

42. ವಿಧಾನ ಮಂಡಲದ ಫಲಪ್ರದ ಚರ್ಚೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವಂತೆ ನಾನು ಆಡಳಿತ ಮತ್ತು ವಿರೋಧ ಪಕ್ಷಗಳೆರಡಕ್ಕೂ ಕರೆ ನೀಡುತ್ತೇನೆ. ಸಮೃದ್ಧ ಮತ್ತು ಪ್ರಗತಿಪರ ಕರ್ನಾಟಕವನ್ನು ಕಟ್ಟುವಲ್ಲಿ ತಮ್ಮೆಲ್ಲರ ಸಹಕಾರವನ್ನು ಕೋರುತ್ತೇನೆ. ಉಭಯ ಸದನಗಳಲ್ಲಿ ಆಗುವ ಚರ್ಚೆಗಳು ನಾಗರಿಕ ಕೇಂದ್ರಿತ ಮಾರ್ಗದಿಂದ ಆಡಳಿತದಲ್ಲಿ ಅಪೇಕ್ಷಣೀಯ ಬದಲಾವಣೆಗಳನ್ನು ತರಲು ಕಾರಣವಾಗುತ್ತದೆಂದು ನಾನು ಪ್ರಾಮಾಣಿಕವಾಗಿ ನಂಬಿದ್ದೇನೆ. ಜನರ ಕನಸುಗಳನ್ನು ಸಾಕಾರಗೊಳಿಸಲು ತಾವು ಮಾಡುವ ಪ್ರಯತ್ನಗಳಿಗೆ ನಾನು ಶುಭ ಹಾರೈಸುತ್ತೇನೆ.

ಜೈ ಹಿಂದ್

ಜೈ ಕರ್ನಾಟಕ

ಅನುಬಂಧ-1

Hon'ble Chairman, Karnataka Legislative Council,

Hon'ble Speaker, Karnataka Legislative Assembly,

Hon'ble Chief Minister of Karnataka,

Hon'ble Leader of the Opposition in the Council,

Hon'ble Leader of the Opposition in the Assembly,

Hon'ble Ministers and

Hon'ble Members of the Karnataka Legislature,

1. It gives me great pleasure to welcome all of you to this Joint Session of Karnataka Legislature. I wish all of you a Happy and Productive New year.
2. After the new Government's formation in Karnataka, several path-breaking initiatives have been taken up. My Government is committed to provide a clean, efficient and transparent administration for ensuring the overall development of the State and its People. My Government welcomes the Jan Lokpal Bill of Government of India and action is being taken to adopt it in our State.
3. My Government has constituted a committee for strengthening, Tracking and simplifying Governance, under the Chairmanship of the Hon'ble Law Minister. The efforts of the State Government to make administration transparent, accountable and corruption free have been recognised at the national level. The Karnataka Sakala Service Act, 2011 project

implementation has been given the National Silver Award for e-Governance for outstanding performance in public service delivery. A Gold award has been conferred on "Electronic Integration of BHOOMI with stakeholders" project, which aims at improving the land administration processes.

4. My Government has been able to ensure peace and tranquillity in the State. I am happy to report that there has been state. I am happy to report that there has been a decline in the number of communal incidents in the state. However, my Government is aware of the need to curb all attempts being made by fundamentalist organisations to vitiate communal harmony in different parts of the State. The role of social media in triggering such events needs to be monitored and the Government has been taking prompt, effective and unbiased administrative action to prevent any disruption in maintaining communal harmony. The Government recognises the need to provide safety and security to all citizens, more particularly the weakest sections of the population. The Government has given approval for setting up 10 special courts for speedy disposal of cases against women. The State has made rapid progress in implementing Crime and Criminal Tracking and Network Systems. This system enables authorised persons to access all records from FIR to charge sheet at any time and from anywhere. Karnataka is the first State in the Country to link Police Stations with the Courts enabling free flow of FIRs and

Charges Sheets in real time. The State has also taken definite measures for the welfare of the police personnel.

5. A State Level Steering Committee has been constituted to implement UNDP and Central Planning Commission initiative called "Towards Bridging Inequalities in Human Development". The State Human Development Report will be drafted by 2014-15. During 2013-14, it is proposed to publish Human Development Report of all the districts of the State simultaneously. For this purpose, Lead Agencies have been identified. A Quality Monitoring Group has been constituted to ensure quality and consistency through regular reviewing and monitoring.

6. My Government has been successful in paving the way for ushering in a new wave of development in Hyderabad-Karnataka area. With the untiring efforts of the State Government, a special status to Hyderabad Karnataka Region has now been granted by the Central Government. In pursuance of this, my Government has issued orders to give effect to the implementation of Article 371(J) of the Constitution of India on 24.10.2013. Hyderabad-Karnataka Region Development Board has now come into being. The draft Rules have been notified to provide reservation in employment and education, for ensuring all-round development of this Region.

7. My Government is committed to safeguard the legal and constitutional rights of all disadvantaged groups and weaker sections. In this direction, the programmes of the departments of

Social welfare, Backward Classes and Minorities have been given top priority in all respects. "The Karnataka Scheduled Caste Sub-Plan and Scheduled Tribes Sub-Plan (Preparation of Plan, Allocation and Utilisation of Financial Resources) Act-2013" has been passed for earmarking a portion of State plan outlay for Scheduled Caste and Scheduled Tribe Sub Plan in proportion to their population and it provides institutional mechanism for budgeting, implementation and monitoring of sub plan. This will go a long way in ensuring adequate and effective utilisation of plan funds meant for SC/ST welfare.

8. A new scheme called "Vidya Siri" has been launched to provide scholarships at ₹ 1500/-per month to students belonging to other backward classes, who are unable to get admissions in Government hostels.

9. My Government has given top priority to Food Security for the poor. National Food Security Act has been implemented in the State. Under the "Anna Bhagya "Scheme, 86.35 lakh BPL card holders and under "Anthyodaya Anna Yojana" Scheme, 11.01 lakh card holders have benefitted so far. The "Padithara Khatri" Scheme would be introduced with effect from February, 2014, to enable the public to take their ration during the first 10 days of the month. This measure provides assurance to beneficiaries to get food grains in a definitive time frame. Karnataka is the first State to have introduced the distribution of ragi and jowar through the public distribution system.

10. In order to improve the nutritional levels of school children, my Government has introduced the "Ksheera-Bhagya" scheme, providing milk to 61 lakh students and 40 lakh anganwadi children, on alternate days.

11. My Government is committed to give social security to all eligible beneficiaries below the poverty line. Pensions have been sanctioned and are being disbursed to 35 lakh beneficiaries. The newly introduced Mansivini and Maithri schemes have become very popular among targeted groups. My Government has enhanced the quantum of Freedom Fighters' Pension/Family pension during the current financial year. The innovative idea of holding Pension, Adalats at Hobli level have helped the eligible pensioners, in a big way and they do not have to visit the taluka offices now.

12. A number of reforms have been introduced in the Revenue Department in larger public interest. The Committee constituted under the Land Grant Act is being re-constituted on constituency basis, in place of taluka. The provisions of Section 109 under the Karnataka Land Reforms Act, 1961, is sought to be simplified. On 01.01.2014, Right to Fair Compensation and Transparency in Land Acquisition, Rehabilitation and Resettlement Act, 2013 has come into force. Orders have been issued to convert small hamlets of Gollara Hatti, Thanda and Majares into revenue villages having a population of 250, for promoting their socio-economic development.

13. The State has been reeling under severe drought and 98 taluks been declared as drought affected. The mitigation efforts have been taken up on war footing by utilising the Central as well as State funds.

14. Providing safe drinking water has always been the top most priority of my Government. For this purpose, several multi-village schemes with the assistance of Government of India have been initiated. During the last eight months, 1,000 habitations affected with fluoride and arsenic contamination have been identified and they will be provided with pure drinking water. A new scheme has also been launched to provide drinking water from Cauvery river to 110 villages, recently added to BBMP limits.

15. Steps have been taken to rejuvenate 12,000 water tanks to improve ground water recharge. In order to solve the shortage of technical hands, the process of engaging around 1000 Engineers/Agricultural graduates on contract basis has been initiated.

16. My Government has provided adequate funds to take up major irrigation schemes to provide water for the irrigated crops in the State. The Hon'ble Tribunal has issued a clarificatory order on the sharing of Krishna waters. Hence, the Upper Krishna III stage works will now be taken up on top priority. The Yettinahole project will be taken up to provide drinking water to dry areas of Kolar and Chikkabllapur. My Government has succeeded in getting Central clearance for a Project on

"Extension , Renovation and Modernisation of Narayanpur Left Bank Canal" with an outlay of ₹ 3750 crore. We have also obtained clearance for Upper Tunga Project with an outlay of ₹ 2560 crore under the National Water Mission.

17. My Government has been running the extremely successful 'Bhoo-Chetna' scheme in the State, to enrich soils with micronutrients while balancing the use of fertilisers. We have launched this year, 'Bhoo-Chetana' plus scheme which aims to converge activities of all land based departments to bring better value to the farmers. My Government is committed to improve rainfed agricultural production. In this direction, improved agricultural practices have been adopted in 69 lakh hectares of dry land under an arrangement with ICRISAT.

18. In order to avoid distress sale, the Department of Agriculture Marketing has introduced organised marketing system by providing infrastructure facilities and resorting to purchase of commodities from the farmers, by giving Minimum Support Price (MSP) and subsidy. Based on the report submitted by Agricultural Marketing Reforms Committee and the Karnataka Agricultural Marketing Policy-2013, action has been taken to incorporate reform measures and suitable amendments to the Karnataka Agricultural Marketing (Regulation and Development) Act 1966 and Rules1968.

19. While farmer is the backbone of the country, Animal Husbandry is the financial backbone of the farmer. To Promote Dairying and to improve the economic condition of the farmers in the

State, the incentive at ₹ 2/- per litre has been enhanced to ₹ 4/- per litre of milk. Government is also giving compensation to farmers who have lost their animals due to Foot and Mouth disease outbreaks in the State. My Government has taken up several schemes to protect farmers' animals from contagious diseases. In addition, modernisation and construction of new Veterinary Hospitals and Veterinary Dispensaries is being taken up on a large scale. It is proposed to establish one Speciality Hospital in each revenue division and one Super Speciality Hospital at Bangalore to provide High Tech treatment to animals.

20. The Fisheries Department is providing high quality protein food to the people besides generating revenue, employment and also foreign exchange. My Government plans to set up a Project Implementation Cell to speed up coastal civil works for Karnataka Fishing Harbour and Landing Centres to promote coastal fishing.

21. I am happy to inform you that our State has achieved the Millennium Development Goals during this year with respect to Infant Mortality rate. While India's Under 5 Mortality Rate is 52 and Infant Mortality Rate is 42, Karnataka has been successful in bringing it down to 37 and 32 respectively. Our State has been the 1st State to introduce Universal health coverage in the form of the 'Rajiv Arogya Bhagya' Programme, which is a health assurance programme for APL families. Some of the initiatives like the Toll free No.104 for Health

Information Help Line, to help general public avail Health information and Health Services across the State, have yielded good results. Round the clock Citizen's Help Desk is another novel scheme which has been implemented in District Hospitals and Major Hospitals to guide and help the patients in getting proper and timely health care. This has resulted in substantial reduction in waiting time as well as grievances of the patients. The Government of Karnataka proposes to establish a Medical College in every district in the State. An amendment has been made to Post Graduation Entrance Test Rules 2006, for giving preference to the Karnataka domicile students.

22. After my Government came into power, several programmes have been taken up by the Rural Development and Panchayat Raj Department to reiterate the Rural Development Vision of improving the living standards of rural Karnataka. In order to ensure transparency and efficiency in physical and financial progress of works, a decision has been taken to make all bill payments through Gandhi Kayaka Software.

23. In order to provide statutory rights to maintain sanitation in villages, Karnataka Sanitary Facilities Guarantee Bill-2014 is being introduced.

24. In Order to highlight the rural living conditions, history, culture, natural resources and developmental activities, with the assistance of Karnataka Janapada University, it is planned to constitute a "Grama Charitra Cell". A comprehensive village

development plan will be taken up to provide good roads, drainages, playgrounds, parks etc, in rural areas.

25. A Toll-Free Help Line has been started for assisting the villagers seeking employment under National Rural Employment Guarantee Scheme. An amount of ₹ 1340 crore has already been electronically transferred, directly to the accounts of the persons employed under the Scheme.

26. The resources of the Gram Panchayats have been considerably augmented by enhancing their statutory grants. A new award has been instituted under "Gandhi Gram Puraskar" Scheme, to encourage the Gram Panchayats to achieve better financial performance. Biometrics has been introduced in all offices to bring greater discipline and productivity among the employees.

27. In order to make available houses at reasonable cost especially for the Economically Weaker Section/Low Income Group categories, my Government has formulated an 'Affordable Housing Policy' We will operationalize the strategy envisaged in the National Urban Housing and Habitat Policy (NUHHP) 2007 to promote various types of Public Private Partnerships (PPP) with developers, through incentives and concessions.

28. In order enable to our students to get access to knowledge through internet, my Government has decided to provide laptops and electronic notepad to PUC students. Free of cost. The problems of vacancies in schools have been addressed in top priority by approving the recruitment of teachers. My Government has taken concrete steps to set up exclusive women

colleges in 24 districts especially in the educationally backward areas. Steps have been taken to utilise the funds available under Rashtriya Uchhatara Shiskahana Abhiyana (RUSA) by creating a Special Cell. In order to improve the quality of higher education it is proposed to set up a Higher Education Academy at Dharwad. Special entrepreneurship training programmes for colleges and University students has been initiated. Besides, satellite based education is being extended to all First Grade Colleges and Polytechnics by utilising outstanding resource persons.

29. The New Industrial Policy will be formulated and implemented from 01.04.2014. This policy will ensure balanced and integrated industrialisation of the State through up-gradation of the manufacturing sector targeting creation of 10 lakh direct jobs in the next five years. In order to create more employment and to project the State as a preferred destination for investors, a Global Investors' Meet is planned during the month of October, 2014. In order to facilitate Investors, a facility will be provided to file the applications and to obtain all approvals/ licenses online from various stakeholders.

30. With a view utilise the skill in the Information Technology Sector which has great employment potential, The Government has brought out a policy to attract investment and to encourage skill development and entrepreneurship especially in Tier 2 and Tier 3 Cities. Karnataka will be the first State in India to launch

New Age Incubators in these cities to connect youth, ideas, funding and mentors.

31. In the area of e-Governance, the Government would be establishing Common Service Centres (CSC) and E-District programmes in all the Gram panchayats to deliver Government to citizen and business to citizen services. The State is set to launch mobile services. The State is set to launch mobile services to offer over 250 services on cell phones to its citizens and this will progressively cover all citizens and this will progressively cover all citizens. I am happy to report that under the existing e-procurement programme over ₹ 50,000 crore worth of procurement business is carried out every year which makes it one of the largest in India.

32. My Government has set up a "Vision Group" to re-orient tourism ventures in the State. Adequate fillip has been given for the participation of the private sector in creation of infrastructure. My Government will encourage the Corporates, as a part of their Social responsibility, to "Adopt a Tourist Destination" programme for protecting the environment and improving infrastructure. In order to boost coastal tourism in the State, My Government has sent a proposal to Government of India seeking relaxation of Castal Regulation Zone guidelines. A Mega Coastal Circuit Project is being taken up in the State with the assistance of Government of India.

33. Stringent measures have been put in place to curb illegal mining and transportation of our mineral wealth and my Government

has come out with a new legislation on stone crushers and quarrying. Prompt action has been taken on the report of Hon'ble Lokayukta on illegal iron ore mining, to ensure that the guilty are punished. As per the Hon'ble Supreme Court orders, the State is committed to formulate and implement suitable Reclamation and Rehabilitation (R&R) plans for mining affected districts of Bellary, Chitradurga and Tumkur. The State Government has assigned the task of formulation of R&R plans to the Indian Council of Forestry Research and Education (ICFRE).

34. My Government is committed to protect our forests and natural resources. We will attempt seriously to bring down the cases of man-animal conflicts and compensate farmers adequately for loss of life and property. My Government shall vigorously continue those schemes which encourage forestry on private lands. My Government is committed to protect the rights of Traditional Forest dwellers comprising of Scheduled Castes, Scheduled Tribes, Lambanis and others in the wake of the Central Act.

35. A large number of infrastructural development projects are being taken up to improve the transport sector in major cities. Besides, new energy-efficient vehicles are being introduced to meet the public demand across the State.

36. It is proposed to achieve energy sufficiency during the coming years by adding 3880 MW capacity. Special emphasis on usage

of renewable energy sources is being laid while reducing aggregate technical and commercial losses in distribution.

37. The Government intends to improve the connectivity in the State including Rail, Air and Maritime sectors. Ongoing railway projects will be completed on priority basis. The Government has supported setting up of Rail Coach Factory at Kolar and Yadgir. The Hubli-Ankola Railway Line and Tadadi port will be taken forward, in co-ordination with Government of India.

38. Infrastructure sector will be strengthened by taking up signature projects such as City Gas Distribution (CGD) for clean fuel, Bangalore International Convention Centre (BIC) and Devanahalli Business Park (DBP).A Policy on Minor Airports is being prepared for improving the Regional Air Connectivity in the State.

39. Bangalore occupies a pride of place in both National and International arena. My Government is committed to improve the infrastructure, services and facilities for over 10 million residents of the City. Many new projects for improving traffic congestion, solid waste management and housing, etc. have been initiated. The Banglore International Airport has been recently named after Nadaprabhu Shri Kempegouda, meeting the long pending aspiration of our people.

40. The Bangalore Metro Rail Project is being pursued vigorously. The section between Peenya villages Station and Nagasandra is expected to be commissioned for public in month of August 2014. The entire East-west Corridor between Baiyappanahalli

and Mysore Road Terminal is expected to be opened for public by the end of 2014.

41. In the current financial years, for the period ending December, 2013, more than ₹ 35000 crore of revenue has been collected under commercial Taxes and Excise, recording a growth in excess of 12% over the corresponding period in the previous year. All efforts are being made to meet the revenue targets, so as to ensure meaningful implementation of the development programmes being undertaken by the Government.

42. I call upon both the Ruling and the Opposition parties to take active part in fruitful discussions in the Legislature. I seek the active co-operation of one and all towards building a prosperous and progressive Karnataka. I sincerely hope that the deliberations in both the Houses would lead to bringing in desirable changes in governance with a citizen centric approach. My best wishes to all of you for your endeavour in making the dreams of people a reality!

Jai Hind

Jai Karnataka

(ರಾಷ್ಟ್ರಗೀತೆಯೊಂದಿಗೆ ಘನತೆವೆತ್ತ ರಾಜ್ಯಪಾಲರ ಭಾಷಣ ಮುಕ್ತಾಯಗೊಂಡಿತು)
(ಸದನವು ಮಧ್ಯಾಹ್ನ 12 ಗಂಟೆ 45 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನ: 15 ನಿಮಿಷಗಳ ನಂತರ ಸೇರಲು ನಿಶ್ಚಯಿಸಿತು)

(ಸದನವು ಪುನ: 1ಗಂಟೆ 08 ನಿಮಿಷಕ್ಕೆ ಸಮಾವೇಶಗೊಂಡಾಗ ಮಾನ್ಯ ಅಧ್ಯಕ್ಷರು ಪೀಠವನ್ನು ಅಲಂಕರಿಸಿದ್ದರು)

(ವಂದೇ ಮಾತರಂ ಗೀತೆಯೊಂದಿಗೆ ಸದನವು ಪ್ರಾರಂಭವಾಯಿತು)

ಅಧ್ಯಕ್ಷರು: ಮಾನ್ಯ ಎಲ್ಲಾ ಸದಸ್ಯರುಗಳಿಗೆ ಹೊಸ ವರ್ಷದ ಶುಭಾಷಯಗಳನ್ನು ಕೋರುತ್ತೇನೆ. ಹೊಸ ವರ್ಷ ತಮಗೆಲ್ಲರಿಗೂ ಮತ್ತು ರಾಜ್ಯಕ್ಕೂ ಹರ್ಷವನ್ನು ತರಲಿ ಎಂದು ನಾವು ನೀವೆಲ್ಲರೂ ಸೇರಿ ಇವತ್ತು ಪ್ರಾರ್ಥನೆಯನ್ನು ಮಾಡೋಣ. ಈಗ ಮುಂದಿನ ಕಾರ್ಯಕಲಾಪ. ಈಗ ಕಾರ್ಯದರ್ಶಿಯವರಿಂದ ವರದಿ.

2. ಕಾರ್ಯದರ್ಶಿಯವರ ವರದಿ

ಕಾರ್ಯದರ್ಶಿ: ಸನ್ಮಾನ್ಯ ಸಭಾಧ್ಯಕ್ಷರೆ, ಘನತೆವೆತ್ತ ರಾಜ್ಯಪಾಲರು ಮಾಡಿದ ಭಾಷಣದ ಪ್ರತಿಯನ್ನು ಸಭೆಯಲ್ಲಿ ಮಂಡಿಸುತ್ತಿದ್ದೇನೆ. ಕಳೆದ ಅಧಿವೇಶನದಲ್ಲಿ ವರದಿಯನ್ನು ಒಪ್ಪಿಸಿದ ನಂತರ ಮಾನ್ಯ ರಾಜ್ಯಪಾಲರಿಂದ ಒಪ್ಪಗೆಯನ್ನು ಪಡೆದ ವಿಧೇಯಕಗಳ ಪಟ್ಟಿಯನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

(ಅನುಬಂಧ–2)

ಅಧ್ಯಕ್ಷರು: ಮಂಡಿಸಲಾಯಿತು. ಈಗ ಒಂದು ಪ್ರಕಟಣೆ ಇದೆ.